KANNADA

# *The Spoken Word*

# ಅಭಿವಂದನೆ
## (Salutation)

*WILLIAM MARRION BRANHAM*

# ಅಭಿವಂದನೆ
## (Salutation)

**ಪ್ರಕಟನೆ 1: 4-6,-** *ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳಿಗೆ ಯೋಹಾನನು ಬರೆಯುವದೇನೆಂದರೆ ವರ್ತಮಾನ, ಭೂತ, ಭವಿಷ್ಯತ್ಕಾಲಗಳಲ್ಲಿರುವಾತನಿಂದ ಮತ್ತು ಆತನ ಸಿಂಹಾಸನದ ಮುಂದಿರುವ ಏಳು ಆತ್ಮಗಳಿಂದ ಮತ್ತು ನಂಬತಕ್ಕ ಸಾಕ್ಷಿಯೂ ಸತ್ತವರೊಳಗಿಂದ ಮೊದಲು ಎದ್ದು ಬಂದವನೂ, ಭೂರಾಜರ ಒಡೆಯನೂ ಆಗಿರುವ ಯೇಸು ಕ್ರಿಸ್ತನಿಂದ ನಿಮಗೆ ಕೃಪೆಯೂ ಶಾಂತಿಯೂ ಆಗಲಿ.*

ನಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ, ನಮ್ಮನ್ನು ರಾಜ್ಯ (ರಾಜರನ್ನಾಗಿಯೂ)ವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗ ಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್.

ಆಸ್ಯ ಎಂಬ ಶಬ್ದವು ನಿಜವಾಗಿ ಆಸ್ಯಾ ಮೈನರ್ ಆಗಿರುತ್ತದೆ. ಅದು ಒಂದು ಇಂಡಿಯಾನಾ ದೇಶದಷ್ಟು ಗಾತ್ರವಾಗಿರುವ ಒಂದು ಭೂಮಿಯ ಭಾಗವಾಗಿದೆ. ಅಲ್ಲಿರುವ ಬೇರೆ ಎಲ್ಲಾ ಸಭೆಗಳಿಂದ ಆ ಏಳು ಸಭೆಗಳು ಅವುಗಳ ಗುಣ ಸ್ವಭಾವಗಳಿಗೋಸ್ಕರ ಪ್ರತ್ಯೇಕವಾಗಿ ಆರಿಸಿಕೊಳ್ಳಲ್ಪಟ್ಟಿದೆ. ಮತ್ತು ಅದೇ ಸ್ವಭಾವಗಳು ಶತಮಾನಗಳನಂತರ ಮುಂಬರಲಿರುವ ಕಾಲಗಳಲ್ಲಿ ಕಂಡುಬರುವವು.

ಸಿಂಹಾಸನದ ಮುಂದೆ ಇದ್ದ ಆ ಏಳು ಆತ್ಮಗಳೇ ಪ್ರತೀಯೊಂದು ಸಂದೇಶಗಾರರಲ್ಲಿದ್ದು, ಅವರು ಜೀವಿಸುತ್ತಿದ್ದ ಆಯಾ ಯುಗಗಳಲ್ಲಿ ಅವರವರ ಸೇವೆಯನ್ನು ಕೊಡುತ್ತಿದ್ದವು.

ಈಗ, ಇರುವಾತನು ಮತ್ತು ಇದ್ದಾತನು ಮತ್ತು ಇನ್ನು ಬರುವಾತನು ಮತ್ತು ನಂಬಿಗಸ್ತನಾದ ಸಾಕ್ಷಿ ಮತ್ತು ಸತ್ತವರೊಳಗಿಂದ ಮೊದಲು ಎದ್ದು ಬಂದವನು ಮತ್ತು ಭೂಲೋಕದ ರಾಜರ ಒಡೆಯನು ಮತ್ತು ಆದಿಯೂ ಅಂತ್ಯವೂ ಮತ್ತು ಸರ್ವಶಕ್ತನು ಎಂಬ ಈ ಎಲ್ಲಾ ಶಬ್ದ ಪ್ರಯೋಗಗಳು ಇವುಗಳೆಲ್ಲಾ ಒಬ್ಬನೇ ವ್ಯಕ್ತಿಯ ಶೀರ್ಷಿಕೆಗಳು ಮತ್ತು ವಿವರಣೆಗಳು, ಆತನೇ ಕರ್ತನಾದ ಯೇಸು ಕ್ರಿಸ್ತನು; ಆತನು ನಮ್ಮನ್ನು ನಮ್ಮ ಪಾಪಗಳಿಂದ ಆತನ ಸ್ವಂತ ರಕ್ತದ ಮೂಲಕವಾಗಿ ಶುದ್ಧಿ ಮಾಡಿದನು.

ಯೋಹಾನನಲ್ಲಿರುವ ದೇವರಾತ್ಮವು ಈ ರೀತಿಯಾಗಿ ವ್ಯಕ್ತಪಡಿಸುತ್ತದೆ. ಯೇಸು ಕ್ರಿಸ್ತನ ಸರ್ವೋಚ್ಚ ದೈವತ್ವವನ್ನು ಸ್ಥಾಪಿಸುತ್ತದೆ ಮತ್ತು ದೈವತ್ವವನ್ನು

ಒಬ್ಬನೇ ದೇವರಾಗಿ ಪ್ರಕಟಪಡಿಸುತ್ತದೆ. ಈ ದಿನದಲ್ಲಿ ಇಲ್ಲಿ ಬಹಳ ತಪ್ಪಾದ ಅಭಿಪ್ರಾಯ ವಿದೆ. ಅದೇನೆಂದರೆ ಒಬ್ಬನೇ ದೇವರ ಬದಲಾಗಿ ಅಲ್ಲಿ ಮೂರು ದೇವರಿದ್ದಾರೆಂಬದಾಗಿದೆ. ಯೋಹಾನನಿಗೆ ಸ್ವಂತವಾಗಿ ಯೇಸುವಿನಿಂದ ಕೊಡಲ್ಪಟ್ಟ ಈ ಪ್ರಕಟನೆಯು, ಈ ತಪ್ಪನ್ನು ಸರಿಪಡಿಸುತ್ತದೆ. ಅದೇನೆಂದರೆ ಅಲ್ಲಿ ಮೂರು ದೇವರಿಲ್ಲ, ಆದರೆ ಮೂರು ಅಧಿಕಾರಗಳುಳ್ಳ ಒಬ್ಬನೇ ದೇವರು. ಮೂರು ಶೀರ್ಷಿಕೆಗಳುಳ್ಳ ಒಬ್ಬನೇ ದೇವರು, ಅವು ತಂದೆ, ಮಗ, ಪವಿತ್ರಾತ್ಮ. ಆ ಮೊದಲನೆಯ ಸಭೆಯಲ್ಲಿ ಈ ಶಕ್ತಿಯುತವಾದ ಪ್ರಕಟನೆ ಇತ್ತು. ಮತ್ತು ಈ ಕಡೇ ದಿನದಲ್ಲಿ, ನೀರಿನ ದೀಕ್ಷಾಸ್ನಾನದ ಸರಿಯಾದ ಮಾದರಿಯೊಂದಿಗೆ ಇದೆಲ್ಲವೂ ಪುನರ್ ಸ್ಥಾಪಿಸಲ್ಪಡಬೇಕು.

ಈಗ ಆಧುನಿಕ ದೈವ ಶಾಸ್ತ್ರಜ್ಞರು ನಮ್ಮೊಡನೆ ಸಮ್ಮತಿಸಲಿಕ್ಕಿಲ್ಲ. ಯಾಕಂದರೆ ಇಲ್ಲಿ ಒಂದು ಶ್ರೇಷ್ಠವಾದ ಕ್ರೈಸ್ತ ಮ್ಯಾಗಜೀನ್‌ನಲ್ಲಿ ಹೀಗೆ ಬರೆದಿತ್ತು,- ಈ ಬೋಧನೆಯು (ತ್ರಿತ್ವದ ವಿಷಯವಾಗಿ) ಹಳೇ ಒಡಂಬಡಿಕೆಯ ಮುಖ್ಯ ಸಾರಾಂಶವಾಗಿದೆ. ಅದು ಪ್ರತಿಯೊಂದು ವಿಷಯದಲ್ಲಿಯೂ ಹೊಸ ಒಡಂಬಡಿಕೆಯ ಮುಖ್ಯ ಸಾರಾಂಶವೂ ಆಗಿದೆ. ಅಲ್ಲಿ ಒಂದಕ್ಕಿಂತ ಹೆಚ್ಚು ದೇವರಿದ್ದಾರೆಂಬ ಆಲೋಚನೆಗೆ ಹಳೇ ಒಡಂಬಡಿಕೆಯು ಎಷ್ಟು ವಿರುದ್ಧ ವಾಗಿದೆಯೋ, ಹೊಸ ಒಡಂಬಡಿಕೆಯೂ ಅಷ್ಟೇ ವಿರೋಧವಾಗಿದೆ. ಆದರೂ ಹೊಸ ಒಡಂಬಡಿಕೆಯು ಅಷ್ಟೇ ಸ್ಪಷ್ಟತೆಯಿಂದ, ತಂದೆಯು ದೇವರು, ಮತ್ತು ಮಗನು ದೇವರು ಮತ್ತು ಪವಿತ್ರಾತ್ಮವು ದೇವರು, ಎಂದು ಬೋಧಿಸುತ್ತದೆ. ಮತ್ತು ಈ ಮೂರು - ಒಂದೇ ವ್ಯಕ್ತಿಯ ಮೂರು ಭಾಗಗಳಲ್ಲ (ಗುಣಗಳಲ್ಲ) ಆದರೆ ಮೂರು ವ್ಯಕ್ತಿಗಳು ಒಬ್ಬರಿಗೊಬ್ಬರು ಒಂದು ನಿಜವಾದ ವೈಯಕ್ತಿಕ ಸಂಬಂಧದಲ್ಲಿ ನಿಂತುಕೊಂಡಿರುವಂಥದ್ದು. ಇಲ್ಲಿಯೇ ಆ ಮೂರು ವ್ಯಕ್ತಿಗಳ ಆದರೆ ಒಂದೇ ದೇವರ, ಆ ಮಹಾ ಸಿದ್ಧಾಂತವು ಇದೆ.

ಅವರು ಸತ್ಯವೇದದ ಅನುಸಾರವಾಗಿ ದೇವರು ಕೇವಲ ಒಂದು ವ್ಯಕ್ತಿಯಲ್ಲ, ಆದರೆ ಆತನು ಒಬ್ಬನೇ ದೇವರಲ್ಲಿರುವ ಮೂರು ವ್ಯಕ್ತಿಗಳಾಗಿದ್ದಾರೆ, ಅದುವೇ ಆ ತ್ರಿತ್ವದ ಮಹಾ ರಹಸ್ಯವಾಗಿದೆ, ಎಂಬದಾಗಿಯೂ ಹೇಳುತ್ತಾರೆ.

ಅದು ಖಂಡಿತವಾಗಿ ಹಾಗಿದೆ. ಒಬ್ಬನೇ ದೇವರಲ್ಲಿ ಮೂರು ವ್ಯಕ್ತಿಗಳು ಇರಲು ಹೇಗೆ ಸಾಧ್ಯ? ಅದಕ್ಕೋಸ್ಕರ ಅಲ್ಲಿ ಯಾವ ಸತ್ಯವೇದವೂ ಇಲ್ಲ. ಅಷ್ಟೇ ಅಲ್ಲದೆ, ಅದು ಒಂದು ವಿವೇಕದಿಂದ ತುಂಬಿದ ವಿವೇಚನಾ ಶಕ್ತಿಯ ಲೋಪವನ್ನು ಅಲ್ಲಿ ತೋರಿಸುತ್ತದೆ. ಮೂರು ಬೇರೆ ಬೇರೆ ಯಾವ ವ್ಯಕ್ತಿಗಳು, ಒಂದೇ ರೀತಿಯ ವಿಷಯವಾಗಿದ್ದರೂ, ಮೂರು ದೇವರನ್ನು ಉಂಟು ಮಾಡುತ್ತದೆ, ಅಥವಾ ಭಾಷೆಯು ತನ್ನ ಎಲ್ಲಾ ಅರ್ಥವನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ.

ಈ ವಾಕ್ಯಗಳ ಕಡೆಗೆ ಪುನಃ ಲಕ್ಷ್ಯವಿಡಿರಿ,- ನಾನು ಆದಿಯೂ, ಅಂತ್ಯವೂ, ಪ್ರಾರಂಭವೂ, ಸಮಾಪ್ತಿಯೂ ಆಗಿದ್ದೇನೆ ಎಂದು ಇರುವಾತನಾದ, ಇದ್ದಾತನಾದ, ಮುಂದೆ ಬರುವಾತನಾದ, ಆ ಸರ್ವಶಕ್ತನಾದ ಕರ್ತನು ಹೇಳುತ್ತಾನೆ. ಇದು ದೈವತ್ವವಾಗಿದೆ. ಇದು ಸರಳವಾದ ಕೇವಲ ಒಂದು ಪ್ರವಾದಿಯಲ್ಲ, ಮನುಷ್ಯನಲ್ಲ, ಇದು ದೇವರು ತಾನೇ ಆಗಿದ್ದಾನೆ. ಮತ್ತು ಇದು ಮೂರು ದೇವರುಗಳ ಒಂದು ಪ್ರಕಟನೆಯಲ್ಲ, ಆದರೆ ಸರ್ವಶಕ್ತನಾಗಿರುವ ಆ ಒಂದೇ ದೇವರ ಪ್ರಕಟನೆಯಾಗಿದೆ.

ಆದಿ ಕ್ರೈಸ್ತ ಸಭೆಯ ಜನರು ಮೂರು ದೇವರಲ್ಲಿ ನಂಬಲಿಲ್ಲ. ಅಂಥಾ ನಂಬಿಕೆಯನ್ನು ನೀನು ಅಪೋಸ್ತಲರ ಮಧ್ಯದಲ್ಲಿ ಕಾಣಲಾರಿ. ಇದು ಅಪೋಸ್ತಲರ ಕಾಲದ ನಂತರ ಈ ಸಿದ್ಧಾಂತವು ಬಂದು ಅದು ಒಂದು ನಿಜವಾದ ಸಿದ್ಧಾಂತವಾಗಿ ಮಾರ್ಪಟ್ಟು ಮತ್ತು ನೈಸಿಯಾ ಕೌನ್ಸಿಲ್‌ನಲ್ಲಿ ಒಂದು ಮುಖ್ಯ ಸಿದ್ಧಾಂತವಾಗಿ ಮಾಡಲ್ಪಟ್ಟಿತು. ದೈವತ್ವದ ಸಿದ್ಧಾಂತವು ನೈಸಿಯಾದಲ್ಲಿ (ಆ ಸಭೆಯನ್ನು) ಇಬ್ಭಾಗವಾಗಿ ಮಾಡಿತು. ಮತ್ತು ಆ ತುಂಡರಿಸುವಿಕೆಯಿಂದಾಗಿ ಅಲ್ಲಿ ಎರಡು ಅತಿರೇಕಗಳು ಉಂಟಾದವು. ಒಂದು ಪಂಗಡವು ಬಹು ದೈವತ್ವದ ಕಡೆಗೆ ಹೋಗಿ ಮೂರು ದೇವರು ಇದ್ದಾರೆ ಎಂದು ನಂಬಿದರು. ಮತ್ತು ಇತರರು ಏಕದೈವತ್ವದ ಕಡೆಗೆ ಹೋದರು. ನಿಜವಾಗಿ ಅದು ಸ್ವಲ್ಪ ಸಮಯಕ್ಕೋಸ್ಕರ ಬಂತು. ಆದರೆ ಅದು ಬಂದೇ ಬಂದಿತು. ಮತ್ತು ಈ ದಿನದಲ್ಲಿಯೂ ಅದು ನಮ್ಮ ಮಧ್ಯದಲ್ಲಿದೆ. ಆದರೆ ಯೋಹಾನನ ಮೂಲಕ ಆತ್ಮನಿಂದ ಸಭೆಗಳಿಗೆ ಕೊಡಲ್ಪಟ್ಟಂಥಾ ಪ್ರಕಟನೆಯು,- ನಾನು ಕರ್ತನಾದ ಯೇಸು ಕ್ರಿಸ್ತನು, ಮತ್ತು ನಾನೇ ಅದರ ಎಲ್ಲವೂ ಆಗಿದ್ದೇನೆ. ಅಲ್ಲಿ ಬೇರೆ ಯಾವ ದೇವರೂ ಇಲ್ಲ. ಮತ್ತು ಆತನು ಈ ಪ್ರಕಟನೆಯ ಮೇಲೆ ತನ್ನ ಮುದ್ರೆಯನ್ನು ಹಾಕಿದನು.

ಇದನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ: ಯೇಸುವಿನ ತಂದೆಯು ಯಾರಾಗಿದ್ದನು? ಮತ್ತಾಯ 1:18 ಹೀಗೆ ಹೇಳುತ್ತದೆ,- ಆಕೆಯು ಪವಿತ್ರಾತ್ಮನಿಂದ ಬಸುರಾಗಿದ್ದದ್ದು ಕಂಡು ಬಂತು. ಆದರೆ ಯೇಸುವು ತಾನಾಗಿ - ದೇವರು ತನ್ನ ತಂದೆಯಾಗಿದ್ದನೆಂದು ಹೇಳುತ್ತಿದ್ದನು. ತಂದೆಯಾದ ದೇವರು ಮತ್ತು ಪವಿತ್ರಾತ್ಮನಾದ ದೇವರು - ನಾವು ಈ ವಾಕ್ಯಗಳನ್ನು ಅನೇಕಸಾರಿ ಹೇಳುತ್ತೇವೆ, ಇದು ತಂದೆಯನ್ನು ಮತ್ತು ಆತ್ಮನನ್ನು ಒಂದೇ ಆಗಿ ಮಾಡುತ್ತದೆ. ಅವರು ನಿಜವಾಗಿ ಒಂದೇ ಆಗಿದ್ದಾರೆ. ಇಲ್ಲದಿದ್ದರೆ ಯೇಸುವಿಗೆ ಎರಡು ತಂದೆಗಳಿದ್ದರು. ಆದರೆ ಯೇಸುವು ಆತನು ಮತ್ತು ಆತನ ತಂದೆಯು ಒಂದೇ ಆಗಿದ್ದಾರೆ ಎಂದು ಹೇಳಿದ್ದನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ. ಒಂದೇ. ಎರಡಲ್ಲ. ಅದು ಒಂದೇ ದೇವರನ್ನು ತೋರಿಸುತ್ತದೆ.

ಇದು ಚಾರಿತ್ರಿಕವಾಗಿಯೂ ಮತ್ತು ವಾಕ್ಯಕ್ಕನುಸಾರವಾಗಿಯೂ ಸತ್ಯವಾಗಿರುವದರಿಂದ, ಆ ಮೂರು ಎಲ್ಲಿಂದ ಬಂತೆಂದು ಜನರು ಆಶ್ಚರ್ಯ ಪಡುತ್ತಾರೆ. ಕ್ರಿಸ್ತ ಶಕ 325ನೇ ಇಸವಿಯಲ್ಲಿ, ನೈಸಿಯಾ ಕೌನ್ಸಿಲ್‌ನಲ್ಲಿ ಅದು ಒಂದು ಬುನಾದಿ ಹಾಕಲ್ಪಟ್ಟ ಸಿದ್ಧಾಂತವಾಯಿತು. ಈ ತ್ರಿತ್ವವು (ಸಂಪೂರ್ಣ ವಾಕ್ಯದಿಂದ ಹೊರಗಿರುವ ಶಬ್ದ) ರೋಮಿನ ಅನೇಕ ದೇವರುಗಳ ಸಿದ್ಧಾಂತದ ಮೇಲೆ ಅವಲಂಬಿಸಿಕೊಂಡಿತ್ತು. ರೋಮಾಯರಲ್ಲಿ ಅನೇಕ ದೇವರುಗಳಿದ್ದರು. ಮತ್ತು ಅವರು ಅವುಗಳಿಗೆ ಪ್ರಾರ್ಥಿಸುತ್ತಿದ್ದರು. ಮತ್ತು ಅವರು ತಮ್ಮ ಪೂರ್ವಜರಿಗೆ(ಸತ್ತವರಿಗೆ) ಮಧ್ಯಸ್ಥರಂತೆ ಪ್ರಾರ್ಥನೆಮಾಡುತ್ತಿದ್ದರು. ಅದು ಒಂದು ಕೇವಲ ಹಳೆಯ ದೇವರುಗಳಿಗೆ ಹೊಸ ಹೆಸರುಗಳನ್ನು ಕೊಡುವ ಒಂದು ಹೆಜ್ಜೆಯಾಗಿತ್ತು. ಹಾಗೆ ಅದು ಹೆಚ್ಚಾಗಿ ಸತ್ಯವೇದದ ಪ್ರಕಾರವಾಗಿ ಕಾಣುವಂತೆ ಅವರನ್ನು ಸಂತ(saints)ರೆಂದು ಕರೆದರು. ಹೀಗೆ ಜ್ಯುಪಿಟರ್, ವೀನಸ್, ಮಾರ್ಸ್‌ನ ಬದಲು ಪೌಲ್, ಪೀಟರ್, ಫಾತಿಮಾ, ಕ್ರಿಸ್ಟೋಫರ್ ಎಂಬ ಇತ್ಯಾದಿ ಹೆಸರುಗಳಲ್ಲಿ ಕರೆದರು. ಅವರ ಆ ಅನ್ಯಜಾತಿಯ ಧರ್ಮವು ಕೇವಲ ಒಬ್ಬನೇ ದೇವರಿಂದ ಕಾರ್ಯ ಸಾಧಕವಾಗಲು ಸಾಧ್ಯವಾಗಲಿಲ್ಲ. ಹಾಗಾಗಿ ಅವರು ಆತನನ್ನು ಮೂರು ಭಾಗವಾಗಿ ಮಾಡಿದರು. ಮತ್ತು ಅವರ ಪೂರ್ವಜರನ್ನು ಮಧ್ಯಸ್ಥಿಕೆ ಮಾಡುವವರನ್ನಾಗಿ ನಂಬುತ್ತಿದ್ದಂತೆ, ಸಂತರನ್ನು ಮಧ್ಯಸ್ಥಿಕೆ ಮಾಡುವವರನ್ನಾಗಿ ಮಾಡಿದರು.

ಆ ಕಾಲದಿಂದ ಹಿಡಿದು, ಅಲ್ಲಿ ಒಬ್ಬನೇ ದೇವರು ಇದ್ದು ಕೇವಲ ಅದರ ಮೂರು ಅಧಿಕಾರಗಳು (offices) ಅಥವಾ ಪ್ರದರ್ಶನಗಳು ಅಲ್ಲಿವೆ ಎಂದು ತಿಳಿದುಕೊಳ್ಳಲು ಜನರು ವಿಫಲರಾದರು. ವಾಕ್ಯದ ಅನುಸಾರವಾಗಿ ಅಲ್ಲಿ ಒಬ್ಬನೇ ದೇವರಿದ್ದಾನೆಂದು ಅವರಿಗೆ ತಿಳಿದಿದೆ. ಆದರೆ ದೇವರು ಒಂದು ದ್ರಾಕ್ಷೆಯ ಗೊಂಚಲಿನಂತೆ ಇದ್ದಾನೆ ಎಂಬ ಆ ಒಂದು ವಿಚಿತ್ರವಾದ ಕಲ್ಪನೆಯನ್ನು ಮಾಡಲು ಅವರು ಪ್ರಯತ್ನಿಸುತ್ತಾರೆ. ಒಂದೇ ರೀತಿಯ ದೈವತ್ವವಿರುವ ಮೂರು ವ್ಯಕ್ತಿಗಳು ಮತ್ತು ಆ ಮೂವರೂ ಅದನ್ನು ಸರಿಸಮಾನವಾಗಿ ಹೊಂದಿಕೊಂಡಿದ್ದಾರೆ. ಆದರೆ ಇಲ್ಲಿ ಪ್ರಕಟನೆಯಲ್ಲಿ ಅದು ಸ್ಪಷ್ಟವಾಗಿ ಹೇಳುತ್ತದ್ದೇನೆಂದರೆ, ಯೇಸು - ಇರುವಾತನು ಇದ್ದಾತನು ಮತ್ತು ಮುಂದೆ ಬರುವಾತನು ಆಗಿದ್ದಾನೆ. ಆತನು ಆದಿ ಮತ್ತು ಅಂತ್ಯವಾಗಿದ್ದಾನೆ. ಅದರ ಅರ್ಥವೇನೆಂದರೆ ಆತನು (ಇಂಗ್ಲಿಷ್) ಅಕ್ಷರ ಮಾಲೆಯ ಎ-ಯಿಂದ ಹಿಡಿದು ಜೆಡ್ (A-Z) ವರೆಗೆ ಆಗಿದ್ದಾನೆ. ಅಥವಾ ಅದರ ಎಲ್ಲವೂ ಆಗಿದ್ದಾನೆ - ಸರ್ವಶಕ್ತನು. ಆತನು ಶಾರೋನಿನ ಗುಲಾಬಿ, ಕಣಿವೆಯ ನೈದಿಲೆ, ಪ್ರಕಾಶಮಾನವಾದ ಉದಯ ನಕ್ಷತ್ರ, ನೀತಿಯ ಕೊಂಬೆ, ತಂದೆ, ಮಗನು, ಪವಿತ್ರಾತ್ಮನು. ಆತನು ದೇವರು, ಸರ್ವಶಕ್ತನಾದ ದೇವರು. ಒಬ್ಬನೇ ದೇವರು.

ಒಂದನೇ ತಿಮೋಥಿ 3:16ರಲ್ಲಿ ಹೀಗೆ ಹೇಳುತ್ತದೆ. *ದೇವ ಭಕ್ತಿಗೆ ಆಧಾರವಾಗಿರುವ ಸತ್ಯಾರ್ಥವು ಗಂಭೀರವಾದದ್ದೆಂಬದಕ್ಕೆ ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ; ಅದೇನೆಂದರೆ - ಆತನು ಶರೀರಾಧಾರಿಯಾಗಿ ಪ್ರತ್ಯಕ್ಷನಾದನು; ಆತ್ಮ ಸಂಬಂಧವಾಗಿ ಆತನೇ ಎಂದು ಸ್ಥಾಪಿಸಲ್ಪಟ್ಟನು; ದೇವದೂತರಿಗೆ ಕಾಣಿಸಿಕೊಂಡನು; ಅನ್ಯ ಜನರಲ್ಲಿ ಪ್ರಸಿದ್ಧಿಮಾಡಲ್ಪಟ್ಟನು; ಲೋಕದಲ್ಲಿ ನಂಬಲ್ಪಟ್ಟನು; ಪ್ರಭಾವ ಸ್ಥಾನದಲ್ಲಿ ಸೇರಿಸಲ್ಪಟ್ಟನು.* ಸತ್ಯವೇದವು ಇದನ್ನೇ ಹೇಳುತ್ತದೆ. ಅದು ಮೊದಲನೆಯ ವ್ಯಕ್ತಿ, ಎರಡನೆಯ ವ್ಯಕ್ತಿ ಅಥವಾ ಮೂರನೆಯ ವ್ಯಕ್ತಿಯ ವಿಷಯವಾಗಿ ಏನನ್ನೂ ಹೇಳುವದಿಲ್ಲ. ಅದು ದೇವರು ನರಾವತಾರವೆತ್ತಿದನು ಎಂದು ಹೇಳುತ್ತದೆ. ಒಬ್ಬನೇ ದೇವರು. ಆ ಒಬ್ಬನೇ ದೇವರು ನರಾವತಾರವೆತ್ತಿದನು. ಅದು ಅದನ್ನು ಸ್ಪಷ್ಟಪಡಿಸಲೇಬೇಕು. ದೇವರು ಮನುಷ್ಯ ರೂಪದಲ್ಲಿ ಬಂದನು. ಅದು ಆತನನ್ನು ಇನ್ನೊಬ್ಬ ದೇವರಾಗಿ ಮಾಡಲಿಲ್ಲ. ಆತನು ದೇವರಾಗಿದ್ದನು. ಅದೇ ದೇವರು. ಆಗ ಅದು ಒಂದು ಪ್ರಕಟನೆಯಾಗಿತ್ತು, ಈಗಲೂ ಅದು ಒಂದು ಪ್ರಕಟನೆಯಾಗಿದೆ. ದೇವರು ಒಬ್ಬನೇ.

ನಾವು ಸತ್ಯವೇದದ ಕಡೆಗೆ ಪುನಃ ಹಿಂತಿರುಗಿ, ತನ್ನ ಸ್ವಂತದ ವಿಷಯವಾಗಿ ಆತನು ಕೊಟ್ಟ ಪ್ರಕಟನೆಯ ಪ್ರಕಾರ ತಾನು ಆದಿಯಲ್ಲಿ ಏನಾಗಿದ್ದನು ಎಂಬದನ್ನು ನೋಡೋಣ. ಮಹೋನ್ನತನಾದ ಯೆಹೋವ ದೇವರು ಅಗ್ನಿಯ ಸ್ತಂಭದಲ್ಲಿ ಇಸ್ರಾಯೇಲ್ಯರಿಗೆ ಕಾಣಿಸಿಕೊಂಡನು. ಒಡಂಬಡಿಕೆಯ ದೂತನಂತೆ ಆತನು ಆ ಅಗ್ನಿಯ ಸ್ತಂಭದಲ್ಲಿ ಇದ್ದುಕೊಂಡು, ದಿನಾಲೂ ಇಸ್ರಾಯೇಲ್ಯರನ್ನು ನಡಿಸುತ್ತಿದ್ದನು. ಆ ಮಂದಿರದಲ್ಲಿ ಒಂದು ಮಹಾ ಮೇಘದೊಂದಿಗೆ ತನ್ನ ಬರೋಣವನ್ನು ಘೋಷಿಸಿದನು. ಮತ್ತು ಒಂದು ದಿನ ಆತನಿಗಾಗಿ ತಯಾರು ಮಾಡಲಾದ, ಆ ಕುವರಿಯ ಮೂಲಕ ಜನಿಸಿದ ದೇಹದಲ್ಲಿ ಆತನು ಪ್ರಕಟ ಮಾಡಲ್ಪಟ್ಟನು. ಇಸ್ರಾಯೇಲ್ಯರ ಗುಡಾರಗಳಲ್ಲಿ ವಾಸಮಾಡುತ್ತಿದ್ದ ದೇವರು, ಈಗ ಆತನಿಗೋಸ್ಕರ ಒಂದು ಶಾರೀರಿಕವಾದ ಗುಡಾರವನ್ನು ತೆಗೆದುಕೊಂಡು ಮನುಷ್ಯನ ಮಧ್ಯದಲ್ಲಿ ಮನುಷ್ಯನಂತೆ ವಾಸಿಸಿದನು. ಆದರೆ ಆತನು ಅದೇ ದೇವರಾಗಿದ್ದನು.

ಸತ್ಯವೇದವು, ದೇವರು ಕ್ರಿಸ್ತನಲ್ಲಿ ಇದ್ದನೆಂದು ಬೋಧಿಸುತ್ತದೆ. ಆ ದೇಹವು ಯೇಸುವಾಗಿದ್ದನು. ಆತನ ದೇಹದಲ್ಲಿ ದೈವತ್ವದ ಸರ್ವಸಂಪೂರ್ಣತೆಯು ವಾಸವಾಗಿತ್ತು. ಇದನ್ನು ಇದಕ್ಕಿಂತ ಹೆಚ್ಚು ಸರಳವಾಗಿ ಮಾಡಲು ಸಾಧ್ಯವಿಲ್ಲ. ರಹಸ್ಯವಾಗಿದೆ, ಹೌದು. ಆದರೆ ನಿಜವಾದ ಸತ್ಯ- ಅದನ್ನು ಇನ್ನೂ ಹೆಚ್ಚಾಗಿ ಸರಳವಾಗಿ ಮಾಡಲಾಗದು. ಹಾಗಿದ್ದರೆ ಆತನು ಮೂರು

ವ್ಯಕ್ತಿಗಳಾಗಿರದಿದ್ದರೆ, ಆತನು ಈಗ ಮೂರು ವ್ಯಕ್ತಿಗಳಾಗಿರಲು ಸಾಧ್ಯವಿಲ್ಲ. ಒಬ್ಬನೇ ದೇವರು: ಮತ್ತು ಅದೇ ದೇವರು ನರಾವತಾರವೆತ್ತಿದನು.

ಯೇಸು ಹೇಳಿದ್ದು,- *ನಾನು ದೇವರ ಬಳಿಯಿಂದ ಬಂದಿದ್ದೇನೆ, ಮತ್ತು ನಾನು ದೇವರ ಬಳಿಗೆ (ಹಿಂದೆ) ಹೋಗುತ್ತೇನೆ.* ಯೋಹಾನ 16: 27-28. ಅದುವೇ ನಿಜವಾಗಿ ಸಂಭವಿಸಿತು. ಆತನ ಮರಣ, ಹೂಣಿಡುವಿಕೆ, ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಮೂಲಕ ಆತನು ಈ ಲೋಕದಿಂದ ಮರೆಯಾದನು. ಮತ್ತು ದಮಸ್ಕಕ್ಕೆ ಹೋಗುವ ದಾರಿಯಲ್ಲಿ ಪೌಲನು ಆತನನ್ನು ಭೇಟಿಯಾದನು. ಮತ್ತು ಆತನು ಪೌಲನೊಡನೆ ಮಾತಾಡಿ ಹೀಗೆ ಹೇಳಿದನು,- *ಸೌಲನೇ, ಸೌಲನೇ, ನನ್ನನ್ನು ಯಾಕೆಹಿಂಸೆಪಡಿಸುತ್ತೀ? ಎಂದು ಹೇಳುವ ವಾಣಿಯನ್ನು ಕೇಳಿದನು. ಅವನು- ಕರ್ತನೇ ನೀನಾರು? ಎಂದು ಕೇಳಿದ್ದಕ್ಕೆ ಕರ್ತನು - ನೀನು ಹಿಂಸೆ ಪಡಿಸುವ ಯೇಸುವೇ ನಾನು.* ಆತನು ಅಗ್ನಿ ಸ್ತಂಭವಾಗಿದ್ದನು. ಮಿಂಚಿನಂತಹ ಕುರುಡು ಮಾಡುವ ಬೆಳಕಾಗಿದ್ದನು. ಆತನು ತಾನು ಪುನಃ ಹಿಂದೆ ಹೋಗುವೆನು ಎಂದು ಹೇಳಿದಕ್ಕೆ ಸರಿಯಾಗಿ ಆತನು ಹಿಂದೆ ಹೋಗಿದ್ದನು. ಆತನು ಈ ಮಾಂಸದ ಗುಡಾರ ವನ್ನು ತೆಗೆದುಕೊಳ್ಳುವ ಮೊದಲು, ಯಾವ ರೂಪದಲ್ಲಿ ಇದ್ದನೋ ಅದೇ ರೂಪಕ್ಕೆ ಹಿಂದೆ ಹೋದನು. ಯೋಹಾನನು ಅದೇ ರೀತಿಯಲ್ಲಿ ಅದನ್ನು ನೋಡಿದನು. ಯೋಹಾನ 1:8,- *ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನು ಏಕ ಪುತ್ರನೂ ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು.* ಯೋಹಾನನು ಯೇಸು ಇದ್ದಾನೆ ಎಂದು ಹೇಳುವದನ್ನು ಗಮನಕ್ಕೆ ತನ್ನಿರಿ. ಆತನು ತಂದೆಯ ಎದೆಯಲ್ಲಿ ಇದ್ದಾನೆ.

**ಲೂಕ 2:11,-** *ಅದೇನೆಂದರೆ ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ. ಆತನು ಕ್ರಿಸ್ತನಾಗಿ ಹುಟ್ಟಿದನು. ಮತ್ತು ಎಂಟು ದಿನಗಳನಂತರ ಆತನಿಗೆ ಸುನ್ನತಿಮಾಡಿಸಿದಾಗ ದೂತನು ಅವರಿಗೆ ಹೇಳಿದ ಪ್ರಕಾರ ಆತನಿಗೆ ಯೇಸುವೆಂದು ಹೆಸರಿಟ್ಟರು.* ನಾನು ಒಬ್ಬ ಬ್ರನ್‌ಹಾಮ್ ಆಗಿ ಹುಟ್ಟಿದೆನು. ನಾನು ಹುಟ್ಟಿದಾಗ ಅವರು ನನಗೆ ವಿಲಿಯಮ್ ಎಂದು ಹೆಸರಿಟ್ಟರು. ಆತನು ಕ್ರಿಸ್ತನಾಗಿದ್ದನು, ಆದರೆ ಇಲ್ಲಿ ಮನುಷ್ಯರ ಮಧ್ಯದಲ್ಲಿ ಆತನಿಗೆ ಒಂದು ಹೆಸರು ಕೊಡಲ್ಪಟ್ಟಿತು. ಮನುಷ್ಯರು ನೋಡಬಹುದಾದ ಹೊರಗಿನ ಗುಡಾರವು ಯೇಸು ಎಂದು ಕರೆಯಲ್ಪಟ್ಟಿತು. ಆತನು ಮಹಿಮೆಯ ಕರ್ತನಾಗಿದ್ದನು. ಸರ್ವಶಕ್ತನು. ದೇಹರೂಪದಲ್ಲಿ ಪ್ರಕಟವಾಗಿದ್ದನು. ಆತನು ತಂದೆ, ಮಗ, ಪವಿತ್ರಾತ್ಮನಾಗಿರುವ ದೇವರು. ಆತನು ಅದೆಲ್ಲವೂ ಆಗಿದ್ದಾನೆ.

ತಂದೆ, ಮಗ ಮತ್ತು ಪವಿತ್ರಾತ್ಮ ಇವುಗಳು ಕೇವಲ ಶೀರ್ಷಿಕೆಗಳಾಗಿವೆ. ಅವು ಹೆಸರುಗಳಲ್ಲ. ಈ ಕಾರಣದಿಂದಾಗಿ ನಾವು ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುತ್ತೇವೆ. ಯಾಕಂದರೆ ಅದು ಒಂದು ಹೆಸರಾಗಿದೆ, ಶೀರ್ಷಿಕೆಯಲ್ಲ. ಅದು ಆ ಶೀರ್ಷಿಕೆಗಳ ಹೆಸರಾಗಿದೆ. ಒಂದು ಹೊಸದಾಗಿ ಹುಟ್ಟಿದ ಮಗು ಹೇಗೆ ಮಗನಾಗಿದ್ದುಕೊಂಡು, ನೀನು ಅದಕ್ಕೆ ಹೇಗೆ ಹೆಸರಿಡುತ್ತೀಯೋ, ಅದೇ ರೀತಿಯಾಗಿದೆ. ಅದು ಒಂದು ಮಗುವಾಗಿದೆ, ಮಗನೆಂಬದು ಶೀರ್ಷಿಕೆಯಾಗಿದೆ, ಮತ್ತು ನೀನು ಅದಕ್ಕೆ ಹೆಸರಿಡುತ್ತೀ. ಜೋನ್ ಹೆನ್ರಿ, ಬ್ರೌನ್. ನೀನು ಕೇವಲ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಕೊಡುವದಿಲ್ಲ, ಲೋಕದಲ್ಲಿ ಸಾವಿರಾರು ಯೇಸುಗಳಿದ್ದಾರೆ. ಮತ್ತು ನಮ್ಮ ರಕ್ಷಕನಾದ ಯೇಸುವಿನ ಮೊದಲು ಸಹ ಯೇಸುಗಳಿದ್ದರು. ಆದರೆ ಅವರಲ್ಲಿ ಕೇವಲ ಒಬ್ಬಾತನೇ ಕ್ರಿಸ್ತನಾಗಿ ಹುಟ್ಟಿದನು - ಕರ್ತನಾದ ಯೇಸು ಕ್ರಿಸ್ತನು.

ಯೇಸು ನಿತ್ಯಕಾಲಕ್ಕೂ ದೇವರ ಮಗನು ಎಂದು ಜನರು ತರ್ಕ ಮಾಡುತ್ತಾರೆ. ಇದು ಒಂದು ಅಸಂಬದ್ಧವಾದ ಸಂಗತಿಯಲ್ಲವೇ? ಮಗನು ನಿತ್ಯಕಾಲಕ್ಕೂ ಇರುವದನ್ನು ಯಾರಾದರೂ ಕೇಳಿದ್ದಾರೋ? ಪುತ್ರರಿಗೆ ಪ್ರಾರಂಭವಿದೆ. ಆದರೆ ನಿತ್ಯಕಾಲಕ್ಕೂ ಇರುವಂಥದಕ್ಕೆ ಪ್ರಾರಂಭವೆಂಬುದೇ ಇಲ್ಲ. ಆತನು ಮಾನವ ರೂಪದಲ್ಲಿ ಪ್ರಕಟವಾದ ನಿತ್ಯಕಾಲದ ದೇವರಾಗಿದ್ದಾನೆ. (ಯೆಹೋವ)

ಸಂತ ಯೋಹಾನನ ಸುವಾರ್ತೆಯಲ್ಲಿ ಹೀಗೆ ಹೇಳುತ್ತದೆ,- *ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿ ಇತ್ತು, ಆ ವಾಕ್ಯವು ದೇವರಾಗಿತ್ತು.... ಆ ವಾಕ್ಯವೆಂಬಾತನು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು.* ತಂದೆಯ ನಿತ್ಯಕಾಲದ ವಾಕ್ಯಕ್ಕೆ ಆತನು ಸತ್ಯವಾದ ಮತ್ತು ನಂಬಿಗಸ್ತನಾದ ಸಾಕ್ಷಿಯಾಗಿದ್ದನು. ಆತನು ಪ್ರವಾದಿಯಾಗಿದ್ದನು ಮತ್ತು ತಂದೆಯು ಏನೇನು ಹೇಳಲು ಅನುಮತಿಕೊಟ್ಟನೋ ಅದನ್ನೇ ಆತನು ಹೇಳಲು ಶಕ್ತನಾಗಿದ್ದನು. ಆತನು ಹೇಳಿದ್ದು,- ನನ್ನ ತಂದೆಯು ನನ್ನಲ್ಲಿದ್ದಾನೆ. ಅದುವೇ ಆ ಗುಡಾರವಾದ ಯೇಸು ಹೇಳಿದ್ದು,- ತಂದೆಯು ನನ್ನಲ್ಲಿದ್ದಾನೆ.

ದೇವರಿಗೆ ಅನೇಕ ಶೀರ್ಷಿಕೆಗಳಿವೆ: ನಮ್ಮ ನೀತಿ ಮತ್ತು ನಮ್ಮ ಶಾಂತಿ ಮತ್ತು ಎಂದೆಂದೂ ಇರುವಾತನು ಮತ್ತು ತಂದೆ ಮತ್ತು ಮಗನು ಮತ್ತು ಪವಿತ್ರಾತ್ಮನು. ಆದರೆ ಆತನಿಗೆ ಒಂದೇ ಒಂದು ಮನುಷ್ಯನ ಹೆಸರಿದೆ, ಮತ್ತು ಆ ಹೆಸರು - ಯೇಸು.

ಆತನಿಗೆ ಮೂರು ರೀತಿಯ ಸೇವೆಗಳು (ಅಧಿಕಾರ) ಇರುವದರಿಂದ ಅಥವಾ ಆತನಲ್ಲಿ ಮೂರು ಭಾಗಗಳಲ್ಲಿರುವ ಪ್ರಕಟನೆ ಇರುವದರಿಂದ

ಗಲಿಬಿಲಿಗೊಳ್ಳ ಬೇಡಿರಿ. ಲೋಕದಲ್ಲಿ ಆತನೊಬ್ಬ ಪ್ರವಾದಿಯಾಗಿದ್ದನು; ಪರಲೋಕದಲ್ಲಿ ಆತನು ಯಾಜಕನಾಗಿದ್ದಾನೆ; ಪುನಃ ಹಿಂದೆ ಈ ಲೋಕಕ್ಕೆ ಬರುವಾಗ ರಾಜರ ರಾಜನಾಗಿರುತ್ತಾನೆ. ಇದ್ದಾತನು - ಅದು ಪ್ರವಾದಿಯಾದ ಯೇಸುವು; ಇರುವಾತನು- ಅದು ಮಧ್ಯಸ್ಥಿಕೆ ಮಾಡುತ್ತಿರುವಾತನಾದ ಆ ಮಹಾ ಯಾಜಕನು. ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವುಳ್ಳವನು. ಇನ್ನು ಬರುವಾತನು - ಅದು ಬರುತ್ತಿರುವ ರಾಜನು. ಈ ಲೋಕದಲ್ಲಿ ಆತನು ವಾಕ್ಯವಾಗಿದ್ದನು - ಆ ಪ್ರವಾದಿ, ಆತನ ವಿಷಯವಾಗಿ ಮೋಶೆಯು,- ನಿಮ್ಮ ಕರ್ತನಾದ ದೇವರು ನನ್ನಂತೆಯೇ ಒಬ್ಬ ಪ್ರವಾದಿಯನ್ನು ಎಬ್ಬಿಸುವನು, ಮತ್ತು ಅವರು ಆ ಪ್ರವಾದಿಯ ಮಾತನ್ನು ಕೇಳದೆ ಹೋದರೆ, ಅವರು ಜನರ ಮಧ್ಯದಿಂದ ತೆಗೆದು ಹಾಕಲ್ಪಡುವರು.

ಯೇಸುವಿನ ವಿಷಯವಾದ ಈ ನಿಜ ಸಂಗತಿಗಳನ್ನು ಲಕ್ಷ್ಯಕ್ಕೆ ತನ್ನಿರಿ. ಈ ಲೋಕದಲ್ಲಿ ಆತನು ಒಬ್ಬ ಪ್ರವಾದಿ, ಯಜ್ಞದ ಕುರಿ ಮತ್ತು ಮಗನಾಗಿದ್ದನು. ಅದು ಅವನನ್ನು ಮೂರು ವ್ಯಕ್ತಿಗಳನ್ನಾಗಿ ಮಾಡಲಿಲ್ಲ. ಇವು ಕೇವಲ ಒಬ್ಬನೇ ವ್ಯಕ್ತಿಯಾದ ಯೇಸುವಿನ ಪ್ರಕಟನೆಗಳು ಅಥವಾ ಸೇವೆಗಳು.

ಈಗ ದೈವತ್ವದಲ್ಲಿ ನಿಜವಾಗಿ ಒಬ್ಬ ವ್ಯಕ್ತಿಗಿಂತ ಹೆಚ್ಚು ವ್ಯಕ್ತಿಗಳು ಇರುವರೆಂಬದಾಗಿ, ಮತ್ತು ತ್ರಿತ್ವವಾದಿಗಳು ತಮ್ಮ ವಾದವನ್ನು ಅದು ಸಮರ್ಥಿಸುತ್ತದೆ ಎಂದು ಯೋಚಿಸುವ, ವಾಕ್ಯದ ಅತೀ ಪ್ರೀಯವಾದ ಒಂದು ಭಾಗವು ಇಲ್ಲಿದೆ. ಅದು ಪ್ರಕಟನೆ 5: 6-8,- *ಸಿಂಹಾಸನವೂ ನಾಲ್ಕು ಜೀವಿಗಳೂ ಇದ್ದ ಸ್ಥಳಕ್ಕೂ, ಹಿರಿಯರು ಇದ್ದ ಸ್ಥಳಕ್ಕೂ ಮಧ್ಯದಲ್ಲಿ ಒಂದು ಕುರಿಕೊಯ್ಯಲ್ಪಟ್ಟದ್ದಾಗಿ ನಿಂತಿರುವದನ್ನು ಕಂಡೆನು. ಅದಕ್ಕೆ ಏಳು ಕೊಂಬುಗಳೂ, ಏಳು ಕಣ್ಣುಗಳೂ ಇದ್ದವು. ಅವು ಏನೆಂದರೆ ಭೂಮಿಯ ಮೇಲೆಲ್ಲಾಕಳುಹಿಸಲ್ಪಟ್ಟಿರುವ ದೇವರ ಏಳು ಆತ್ಮಗಳು. ಈತನು ಮುಂದೆ ಬಂದು ಸಿಂಹಾಸನದ ಮೇಲೆ ಕುಳಿತಿದ್ದಾತನ ಬಲಗೈಯೊಳಗಿಂದ ಆ ಸುರುಳಿಯನ್ನು ತೆಗೆದುಕೊಂಡನು. ತೆಗೆದುಕೊಂಡಾಗ ಆ ನಾಲ್ಕು ಜೀವಿಗಳೂ ಇಪ್ಪತ್ತನಾಲ್ಕು ಮಂದಿ ಹಿರಿಯರೂ ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು. ಹಿರಿಯರ ಕೈಗಳಲ್ಲಿ ವೀಣೆಗಳೂ, ದೇವ ಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳೂ ಇದ್ದವು.* ನಿಜವಾಗಿ ಈ ವಾಕ್ಯಗಳು ಅವನ್ನು ಬೇರೆ ಬೇರೆಯಾಗಿ ಮಾಡಿದರೆ, ಅವರ ವಾದವನ್ನು ಸಮರ್ಥಿಸುವಂತೆ ಕಾಣುತ್ತದೆ. ನಾನು ಹೇಳಿದ ಬೇರೆ ಬೇರೆ ಮಾಡಿದ ಈ ವಾಕ್ಯಗಳನ್ನು ಲಕ್ಷ್ಯವಿಡಿರಿ. ಹ್ಯಾಗೂ ಪ್ರಕಟನೆ 4: 2-3 ಮತ್ತು 9-11ನ್ನು ಓದಿರಿ.- *ಇಗೋ, ಪರಲೋಕದಲ್ಲಿ ಒಂದು ಸಿಂಹಾಸನವಿತ್ತು; ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು; ಕೂತಿದ್ದವನು, ಕಣ್ಣಿಗೆ ಸೂರ್ಯಕಾಂತ ಪದ್ಮರಾಗ ಮಣಿಗಳಂತೆ ಕಾಣುತ್ತಿದ್ದನು.*

*ಸಿಂಹಾಸನದ ಸುತ್ತಲು ಪಚ್ಚೆಯಂತೆ ತೋರುತ್ತಿದ್ದ ಮುಗಿಲು ಬಿಲ್ಲು ಇತ್ತು.* (9-11) *ಯುಗಯುಗಾಂತರಗಳಲ್ಲಿಯೂ ಜೀವಿಸುವವನಾಗಿ ಸಿಂಹಾಸನದ ಮೇಲೆ ಕೂತಿರುವಾತನಿಗೆ ಆ ನಾಲ್ಕು ಜೀವಿಗಳು ಪ್ರಭಾವಮಾನ ಕೃತಜ್ಞತಾ ಸುತಿಗಳನ್ನು ಸಲ್ಲಿಸುವಾಗ್ಗೆ ಆ ಇಪ್ಪತ್ತನಾಲ್ಕು ಮಂದಿ ಹಿರಿಯರು ಸಿಂಹಾಸನದ ಮೇಲೆ ಕೂತಾತನ ಪಾದಕ್ಕೆ ಬಿದ್ದು ತಮ್ಮ ಕಿರೀಟಗಳನ್ನು ಸಿಂಹಾಸನದ ಮುಂದೆ ಹಾಕಿ- ಕರ್ತನೇ ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದಾತನು ನೀನೇ; ಎಲ್ಲವೂ ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು. ಎಂದು ಹೇಳುತ್ತಾ ಯುಗ ಯುಗಾಂತರಗಳಲ್ಲಿಯೂ ಜೀವಿಸುವಾತನನ್ನು ಆರಾಧಿಸುತ್ತಾರೆ.* ಎರಡನೇ ವಚನದಲ್ಲಿ,- *ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು* ಎಂದು ಹೇಳುವದನ್ನು ಜಾಗರೂಕತೆಯಿಂದ ಧ್ಯಾನಿಸಿರಿ. (ಇಬ್ಬರು ಅಥವಾ ಮೂವರಲ್ಲ; ಆದರೆ ಒಬ್ಬನು) ಮೂರನೇ ವಚನದಲ್ಲಿ- *ಆತನು* (ಅವರಲ್ಲ) *ಸೂರ್ಯಕಾಂತ ಮಣಿಯಂತೆ ಕಾಣುತ್ತಿದ್ದನು* ಎಂದು ಹೇಳುತ್ತದೆ. ಒಂಬತ್ತನೇ ವಚನದಲ್ಲಿ ಆ ಜೀವಿಗಳು *ಆತನಿಗೆ* (ಅವರಿಗಲ್ಲ) *ಪ್ರಭಾವ ಮಾನಗಳನ್ನು ಸಲ್ಲಿಸಿದರು* ಎಂದು ಹೇಳುತ್ತದೆ. ಹತ್ತನೇ ವಚನದಲ್ಲಿ ಆ *ಹಿರಿಯರು ಆತನ* (ಅವರ- ಎಂದಾಗಿಲ್ಲ) *ಪಾದಕ್ಕೆ ಬಿದ್ದರು* ಎಂದು ಹೇಳುತ್ತದೆ. ಹನ್ನೊಂದನೇ ವಚನದಲ್ಲಿ ಅವರು,- *ಕರ್ತನೇ* (ಕರ್ತರಲ್ಲ) *ನೀನು ಯೋಗ್ಯನಾಗಿದ್ದೀ* ಎಂದು ಅವರು *ಕೂಗಿದರು* ಎಂದು ಹೇಳುತ್ತದೆ. ಮತ್ತು ಹನ್ನೊಂದನೇ ವಚನದಲ್ಲಿ *ಸಿಂಹಾಸನದ ಮೇಲೆ ಇರುವ ಆತನು* (ಯೇಸುವು) ಎಲ್ಲವನ್ನು ಸೃಷ್ಟಿಸಿದಾತನು ಎಂದು ಸಹ ಹೇಳುತ್ತದೆ. (ಯೋಹಾನ 1:3) ಆತನೇ ಹಳೇ ಒಡಂಬಡಿಕೆಯ ಆತ್ಮ ಸ್ವರೂಪದಲ್ಲಿದ್ದ ಯೆಹೋವ ದೇವರು. (ಆದಿಕಾಂಡ 1:1)

ಆದರೆ ನಾವು ಅಲ್ಲಿ ನಿಲ್ಲಿಸದಿರೋಣ. ಈಗ ಪ್ರಕಟನೆ 3:21ರಲ್ಲಿ ಓದಿರಿ,- *ನಾನು ಜಯ ಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕೂತುಕೊಂಡೆನು; ಹಾಗೆಯೇ ಜಯ ಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು.* ಇಬ್ರಿಯ 12:2ನ್ನು ಸಹ ಓದಿರಿ,- *ನಂಬಿಕೆಯನ್ನು ಹುಟ್ಟಿಸುವವನೂ, ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರ ಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನರೂಢನಾಗಿದ್ದಾನೆ.* ಪ್ರಕಟನೆಯನ್ನು ಬರೆದ ಸ್ವತಹ ಯೇಸುವಿನ ಅನುಸಾರವಾಗಿ, ಆತನು ತಂದೆಯೊಂದಿಗೆ ಕೂತುಕೊಂಡಿದ್ದಾನೆ. ಪೌಲನಲ್ಲಿರುವ ಆತ್ಮವು (ಆ ಆತ್ಮವು ಕ್ರಿಸ್ತನ ಆತ್ಮವಾಗಿದೆ, ಯಾಕೆಂದರೆ ವಾಕ್ಯವು ಬರುವಂಥ ಪ್ರವಾದನೆಯ ಆತ್ಮವು ಅದೇ ಆಗಿರುತ್ತದೆ.)

ಹೇಳುತ್ತದೇನೆಂದರೆ *ಆತನು ದೇವರ ಬಲ ಪಾರ್ಶ್ವದಲ್ಲಿ ಕುಳಿತುಕೊಂಡನು.* ಆದರೆ ಯೋಹಾನನು ನೋಡಿದಾಗ ಆತನು ಸಿಂಹಾಸನದ ಮೇಲೆ ಕೇವಲ ಒಬ್ಬಾತನನ್ನೇ ನೋಡಿದನು. ಮತ್ತು ಪ್ರಕಟನೆ 5:6-8ರ ಮೊದಲು ಪ್ರಕಟನೆ 4: 2-3 ಮತ್ತು 9-10ರಲ್ಲಿ ಹೇಳಿದಂತೆ, (ಅದು ಸಮಯದ ಕ್ರಮಾನುಗತಿಯಲ್ಲಿ ಪ್ರಕಟನೆ 4: 2-3ನ್ನು ಹಿಂಬಾಲಿಸುತದೆ.) ನಾವು ಸಿಂಹಾಸನದಲ್ಲಿ ಕೂತಾತನ ಕೈಯಿಂದ ಆ ಕುರಿಯು ಆ ಪುಸ್ತಕವನ್ನು ತೆಗೆದುಕೊಳ್ಳುವದನ್ನು ನೋಡುವದಿಲ್ಲ, ಅದು ಏನಾಗಿದೆ? ಅದುವೇ ಒಂದೇ ದೇವರ (ಒಬ್ಬನೇ ದೇವರ) ರಹಸ್ಯವಾಗಿದೆ. ಆತನು (ಯೇಸು) ದೇವರಿಂದ ಹೊರ ಬಂದನು, ನರಾವತಾರ ವೆತ್ತಿದನು, ಸತ್ತು ಪುನಃ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು, ಮತ್ತು ತಂದೆಯ ಎದೆಯೊಳಗೆ ಪುನಃ ಹಿಂತಿರುಗಿದನು. ಯೋಹಾನನು ಹೇಳಿದಂತೆ,- *ಯಾವನು ಏಕ ಪುತ್ರನೂ ಸ್ವತಹ ದೇವರು ಆಗಿದ್ದು ತಂದೆಯ ಎದೆಯಲ್ಲಿ ಇದ್ದಾನೋ ಆತನೇ ತಿಳಿಯ ಪಡಿಸಿದನು.* ಯೋಹಾನ 1:18. ಈಗ ದೇವರಿಗೆ (ಮೆಸ್ಸೀಯನಿಗೆ) ಹಿಂದೆ ಬಂದು ತನ್ನ ವಧುವನ್ನು ಹಕ್ಕಿನಿಂದ ಕೇಳುವ ಮತ್ತು ಆ ಮೇಲೆ ತನ್ನನ್ನು ತಾನು ಇಸ್ರಾಯೇಲ್ಯರಿಗೆ ಪ್ರಕಟಪಡಿಸಿಕೊಳ್ಳುವ ಸಮಯವಾಗಿದೆ, ಹೀಗೆ ದೇವರು ಮನುಷ್ಯನೊಂದಿಗೆ ದಾವೀದನ ಕುಮಾರನು, ರಾಜರ ರಾಜನು, ಕರ್ತರ ಕರ್ತನು ಮತ್ತು ಅನ್ಯ ಜಾತಿಯ ವಧುವಿನ ಮದಲಿಂಗನು ಎಂಬಂಥ ದೈಹಿಕ ಸಂಬಂಧವನ್ನು ಹೊಂದಿಕೊಳ್ಳುವದಕ್ಕಾಗಿ ಪುನಃ ಮುಂದೆ ಬರುವದನ್ನು ನಾವಿಲ್ಲಿ ನೋಡುತ್ತಿದ್ದೇವೆ. ಅದು ಎರಡು ದೇವರು ಗಳಲ್ಲ, ಆದರೆ ಸರಳವಾಗಿ ಒಬ್ಬನೇ ದೇವರು. ಆತನ ಸಾಮರ್ಥ್ಯವುಳ್ಳ ತ್ರೈಯೇಕ ಅಧಿಕಾರಗಳನ್ನು ಮತ್ತು ಶೀರ್ಷಿಕೆಗಳನ್ನು ಪ್ರಕಟ ಪಡಿಸುವಂಥಾದ್ದಾಗಿದೆ.

ಆತನೊಬ್ಬ ಪ್ರವಾದಿಯಾಗಿದ್ದನೆಂದು ಜನರಿಗೆ ತಿಳಿದಿತ್ತು. ಮೆಸ್ಸೀಯನ ಚಿಹ್ನೆಯು ಕೇವಲ ಒಬ್ಬ ಪ್ರವಾದಿಯ ಮೂಲಕವೇ ಬರಲು ಸಾಧ್ಯವೆಂದು ಅವರು ತಿಳಿದಿದ್ದರು. ಯೋಹಾನ 1:44-51,- *ಈ ಫಿಲಿಪ್ಪನು ಬೆತ್ಸಾಯಿದದವನು, ಅಂದರೆ ಅಂದ್ರೇಯ ಪೇತ್ರರ ಊರಿನವನು. ಫಿಲಿಪ್ಪನು ನತಾನಿಯೇಲನನ್ನು ಕಂಡುಕೊಂಡು ಅವನಿಗೆ- ಯಾವನ ವಿಷಯವಾಗಿ ಮೋಶೆಯು ಧರ್ಮಶಾಸ್ತ್ರದಲ್ಲಿ ಬರೆದನೋ ಮತ್ತು ಪ್ರವಾದಿಗಳು ಬರೆದರೋ, ಆತನು ನಮಗೆ ಸಿಕ್ಕಿದನು; ಆತನು ಯಾರಂದರೆ ಯೋಸೇಫನ ಮಗನಾದ ನಜರೇತಿನ ಯೇಸು ಎಂದು ಹೇಳಿದನು. ನತಾನಿಯೇಲನು - ಒಳ್ಳೇದೇನಾದರೂ ನಜರೇತಿನಿಂದ ಬರುವದುಂಟೇ? ಅಂದಾಗ ಫಿಲಿಪ್ಪನು - ಬಂದು ನೋಡು ಅಂದನು. ಯೇಸು ತನ್ನ ಕಡೆಗೆ ಬರುತ್ತಿರುವ ನತಾನಿಯೇಲನನ್ನು ಕಂಡು ಅವನ ವಿಷಯವಾಗಿ - ಇಗೋ ಇವನು ನಿಜವಾದ ಇಸ್ರಾಯೇಲನು; ಇವನಲ್ಲಿ ಕಪಟವಿಲ್ಲ ಅಂದನು. ನತಾನಿಯೇಲನು - ನನ್ನನ್ನು ನೀನು ಹೇಗೆ ಬಲ್ಲೆ? ಎಂದು ಯೇಸುವನ್ನು ಕೇಳಿದ್ದಕ್ಕೆ ಆತನು - ಫಿಲಿಪ್ಪನು*

*ನಿನ್ನನ್ನು ಕರೆಯುವದಕ್ಕೆ ಮುಂಚೆ ನೀನು ಆ ಅಂಜೂರದ ಮರದ ಕೆಳಗೆ ಇದ್ದಾಗ ನಿನ್ನನ್ನು ನೋಡಿದೆನು ಅಂದನು. ಅದಕ್ಕೆ ನತಾನಿಯೇಲನು- ಗುರುವೇ, ನೀನು ದೇವರ ಕುಮಾರನು ಸರಿ; ನೀನೇ ಇಸ್ರಾಯೇಲ್ಯರ ಅರಸನು ಅಂದನು. ಅದಕ್ಕೆ ಯೇಸು- ಆ ಅಂಜೂರದ ಮರದ ಕೆಳಗೆ ನಿನ್ನನ್ನು ನೋಡಿದೆನೆಂದು ನಾನು ನಿನಗೆ ಹೇಳಿದ ಮಾತ್ರದಿಂದ ನಂಬುತ್ತೀಯೋ? ಇದಕ್ಕಿಂತ ಹೆಚ್ಚಿನ ಕಾರ್ಯಗಳನ್ನು ನೋಡುವಿ ಅಂದನು. ಇದಲ್ಲದೆ ಅವನಿಗೆ - ನಾನು ನಿಮಗೆ ನಿಜ ನಿಜವಾಗಿ ಹೇಳುತ್ತೇನೆ, ಪರಲೋಕವು ತೆರೆದಿರುವದನ್ನೂ, ಮನುಷ್ಯ ಕುಮಾರನ ಮೇಲೆ ದೇವದೂತರು ಏರಿಹೋಗುತ್ತಾ ಇಳಿದು ಬರುತ್ತಾ ಇರುವದನ್ನೂ ನೋಡುವಿರಿ ಎಂದು ಹೇಳಿದನು.* ಮನುಷ್ಯರ ಹೃದಯಗಳ ಆಲೋಚನೆಗಳನ್ನು ವಿವೇಚಿಸಿ ತಿಳಿದುಕೊಳ್ಳುವ ಸಾಮರ್ಥ್ಯವು, ಇಲ್ಲಿ ಒಬ್ಬ ಮೆಸ್ಸೀಯನು, ಅಭಿಷೇಕಿಸಲ್ಪಟ್ಟ ದೇವರ ವಾಕ್ಯವೆಂಬಾತನು ಇದ್ದಾನೆ ಎಂದು ದೇವರಾದುಕೊಂಡವರು ತಿಳಿದುಕೊಳ್ಳುವಂತೆ ಮಾಡಿತು. ಇಬ್ರಿಯ 4:12, - *ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲು ಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ.*

ಬಾವಿಯ ಬಳಿಯಲ್ಲಿ ಇದ್ದಂಥಾ ಆ ಸ್ತ್ರೀಯು, ಆಕೆಯ ಹೃದಯದ ಆಲೋಚನೆಗಳನ್ನು, ಆತನು ವಿವೇಚಿಸಿ ತಿಳಿದುಕೊಂಡನೆಂದು ಕೇಳಿದ ಕೂಡಲೇ ಮೆಸ್ಸೀಯನು ಈ ಮಹಾ ಸಾಮರ್ಥ್ಯದ ಮೂಲಕ ಕಂಡುಕೊಳ್ಳಲ್ಪಡುವನು, ಹಾಗಾಗಿ ಆತನೊಬ್ಬ ಪ್ರವಾದಿಯೆಂದು ಆಕೆ ಜಯಘೋಷಮಾಡಿದಳು. ಯೋಹಾನ 4: 7-26,- *ಆತನ ಶಿಷ್ಯರು ಊಟಕ್ಕೆ ಬೇಕಾದದ್ದನ್ನು ಕೊಂಡುಕೊಳ್ಳುವದಕ್ಕಾಗಿ ಊರೊಳಗೆ ಹೋಗಿರಲು ಸಮಾರ್ಯದವಳಾದ ಒಬ್ಬ ಹೆಂಗಸು ನೀರು ಸೇದುವದಕ್ಕೆ ಬಂದಳು. ಯೇಸು ಆಕೆಯನ್ನು- ಅಮ್ಮಾ, ನೀರು ಕುಡಿಯುವದಕ್ಕೆ ಕೊಡು ಎಂದು ಕೇಳಿದನು. ಯೆಹೂದ್ಯರಿಗೂ ಸಮಾರ್ಯರಿಗೂ ಬಳಿಕೆ ಇಲ್ಲದಿರಲಾಗಿ ಆ ಸಮಾರ್ಯದವಳು ಆತನಿಗೆ - ಯೆಹೂದ್ಯನಾದ ನೀನು ಸಮಾರ್ಯದವಳಾದ ನನ್ನನ್ನು ನೀರು ಬೇಡುವದು ಹೇಗೆ ಎಂದು ಹೇಳಿದಳು. ಅದಕ್ಕೆ ಯೇಸು - ದೇವರು ಕೊಡುವ ವರವೇನೆಂಬದೂ ಕುಡಿಯುವದಕ್ಕೆ ನೀರುಕೊಡು ಎಂದು ನಿನಗೆ ಹೇಳಿದವನು ಯಾರು ಎಂಬದೂ ನಿನಗೆ ತಿಳಿದಿದ್ದರೆ ನೀನು ಅವನನ್ನು ಬೇಡಿಕೊಳ್ಳುತ್ತಿದ್ದಿ, ಅವನು ನಿನಗೆ ಜೀವಕರವಾದ ನೀರನ್ನು ಕೊಡುತ್ತಿದ್ದನು ಅಂದನು. ಆ ಹೆಂಗಸು ಆತನಿಗೆ- ಅಯ್ಯಾ ಸೇದುವದಕ್ಕೆ ನಿನ್ನಲ್ಲಿ ಏನೂ ಇಲ್ಲ, ಬಾವಿ ಆಳವಾಗಿದೆ; ಹೀಗಿರುವಾಗ ಆ ಜೀವಕರವಾದ ನೀರು ನಿನಗೆ ಎಲ್ಲಿಂದ ಬಂತು? ನಮ್ಮ ಹಿರಿಯನಾದ ಯಾಕೋಬನಿಗಿಂತ ನೀನು ದೊಡ್ಡವನೋ? ಅವನೇ ಈ*

*ಬಾವಿಯನ್ನು ನಮಗೆ ಕೊಟ್ಟವನು; ಅವನೂ ಅವನ ಮಕ್ಕಳೂ ಅವನು ಸಾಕಿದೆಲ್ಲವೂ ಸಹಿತವಾಗಿ ಇದೇ ಬಾವಿಯ ನೀರು ಕುಡಿದರು ಅನ್ನಲು ಯೇಸು ಆಕೆಗೆ - ಈ ನೀರನ್ನು ಕುಡಿಯುವವರೆಲ್ಲರಿಗೆ ತಿರಿಗಿ ನೀರಡಿಕೆಯಾಗುವದು; ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ; ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯ ಜೀವವನ್ನು ಉಂಟು ಮಾಡುವದು ಎಂದು ಹೇಳಿದನು. ಆ ಹೆಂಗಸು - ಅಯ್ಯಾ, ನನಗೆ ಆ ನೀರನ್ನು ಕೊಡು; ಕೊಟ್ಟರೆ ನನಗೆ ಇನ್ನು ಮೇಲೆ ನೀರಡಿಕೆಯಾಗಲಿಕ್ಕಿಲ್ಲ; ನೀರು ಸೇದುವದಕ್ಕೆ ಇಷ್ಟು ದೂರ ಬರಬೇಕಾದದ್ದೂ ಇರುವದಿಲ್ಲ ಅನ್ನಲು ಯೇಸು ಅವಳಿಗೆ - ಹೋಗಿ ನಿನ್ನ ಗಂಡನನ್ನು ಇಲ್ಲಿಗೆ ಕರಕೊಂಡು ಬಾ ಎಂದು ಹೇಳಿದನು. ಅದಕ್ಕೆ ಆ ಹೆಂಗಸು - ನನಗೆ ಗಂಡನಿಲ್ಲ ಅಂದಳು. ಯೇಸು ಆಕೆಗೆ- ನನಗೆ ಗಂಡನಿಲ್ಲ ಎಂದು ನೀನು ಹೇಳಿದ್ದು ಸರಿಯಾದ ಮಾತು; ನಿನಗೆ ಐದು ಮಂದಿ ಗಂಡಂದಿರಿದ್ದರು, ಈಗ ಇರುವವನು ನಿನಗೆ ಗಂಡನಲ್ಲ; ನೀನು ಹೇಳಿದ್ದು ನಿಜವಾದ ಸಂಗತಿ ಅಂದನು. ಆ ಹೆಂಗಸು ಆತನಿಗೆ - ಅಯ್ಯಾ ನೀನು ಪ್ರವಾದಿಯೆಂದು ನನಗೆ ಕಾಣುತ್ತದೆ. ನಮ್ಮ ಹಿರಿಯರು ಈ ಬೆಟ್ಟದಲ್ಲಿ ದೇವಾರಾಧನೆ ಮಾಡುತ್ತಿದ್ದರು; ಆದರೆ ನೀವು ಆರಾಧನೆ ಮಾಡತಕ್ಕ ಸ್ಥಳವು ಯೆರೂಸಲೇಮಿನಲ್ಲಿ ಅದೆ ಅನ್ನುತ್ತೀರಿ ಎಂದು ಹೇಳಿದಾಗ ಯೇಸು ಆಕೆಗೆ - ಅಮ್ಮಾ, ನಾನು ಹೇಳುವ ಮಾತನ್ನು ನಂಬು; ಒಂದು ಕಾಲ ಬರುತ್ತದೆ ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸ ಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವದಿಲ್ಲ. ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೇ. ಆದದರಿಂದ ನಾವು ಅರಿತಿರುವದನ್ನೇ ಆರಾಧಿಸುವವರಾಗಿದ್ದೇವೆ; ನೀವು ಅರಿಯದೆ ಇರುವಂಥದ್ದನ್ನು ಆರಾಧಿಸುವವರು. ಆದಿರಲಿ; ಸತ್ಯಭಾವದಿಂದ ದೇವರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂತವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. ದೇವರು ಆತ್ಮ ಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು. ಆ ಹೆಂಗಸು ಆತನಿಗೆ - ಮೆಸ್ಸೀಯನು ಅಂದರೆ ಕ್ರಿಸ್ತನು ಬರುತ್ತಾನೆಂದು ಬಲ್ಲೆನು; ಆತನು ಬಂದ ಮೇಲೆ ನಮಗೆ ಎಲ್ಲಾ ತಿಳಿಸುವನು ಎಂದು ಹೇಳಲು ಯೇಸು ಆಕೆಗೆ- ನಿನ್ನ ಸಂಗಡ ಮಾತಾಡುತ್ತಿರುವ ನಾನೇ ಆ ಮೆಸ್ಸೀಯನು ಎಂದು ಹೇಳಿದನು.*

**ಪ್ರಕಟನೆ 15:3**ರಲ್ಲಿ ಹೀಗೆ ಹೇಳುತ್ತದೆ,- *ಗಾಜಿನ ಸಮುದ್ರದ ಬಳಿಯಲ್ಲಿ ನಿಂತು ದೇವರ ದಾಸನಾದ ಮೋಶೆಯ ಹಾಡನ್ನೂ ಯಜ್ಞದ ಕುರಿಯಾದಾತನ ಹಾಡನ್ನೂ ಹಾಡುತ್ತಾ- ದೇವರಾದ ಕರ್ತನೇ, ಸರ್ವಶಕ್ತನೇ, ನಿನ್ನ ಕೃತ್ಯಗಳು*

*ಮಹತ್ತಾದವುಗಳೂ ಆಶ್ಚರ್ಯಕರವಾದವುಗಳೂ ಆಗಿವೆ: ಸರ್ವ ಜನಾಂಗಗಳ ಅರಸನೇ, ನಿನ್ನ ಮಾರ್ಗಗಳು ನ್ಯಾಯವೂ ಸತ್ಯವೂ ಆಗಿವೆ;* ನೀವು ಅದನ್ನು ನೋಡುತ್ತೀರೋ? ಆ ಕುರಿಯು, ಆ ಮಹಾ ಯಾಜಕನು, ಆ ಕೃಪಾಸನದ ಮುಂದೆ- ಆತನ ರಕ್ತವನ್ನು ನಮ್ಮ ಪಾಪಗಳಿಗೋಸ್ಕರ ಪ್ರಾಯಶ್ಚಿತ್ತವಾಗಿ ಅಲ್ಲಿ ಹಿಡಿದಿರುವವನು- ಆ ಸರ್ವಶಕ್ತನಾದ ಕರ್ತನಾದ ದೇವರು. ಅದು ಆತನ ಈಗಿನ ಕಾರ್ಯವಾಗಿದೆ. ಈಗ ಅದನ್ನೇ ಆತನು ಮಾಡುತ್ತಿದ್ದಾನೆ. ನಮ್ಮ ಪಾಪಗಳಿಗೋಸ್ಕರ ಆತನ ರಕ್ತದ ಮೂಲಕ ಮಧ್ಯಸ್ಥಿಕೆ ಮಾಡುತ್ತಿದ್ದಾನೆ. ಆದರೆ ಒಂದಾನೊಂದು ದಿನ ಆ ಕುರಿಯು ಯೂದಾ ಕುಲದ ಸಿಂಹವಾಗಿ ಮಾರ್ಪಡುವವನು. ಆತನು ಸಾಮರ್ಥ್ಯದೊಂದಿಗೂ ಮಹಿಮೆಯೊಂದಿಗೂ ಬಂದು ರಾಜನಾಗಿ ಆಳಲು ತನ್ನ ಅಧಿಕಾರವನ್ನು ತೆಗೆದುಕೊಳ್ಳುವನು. ಆತನು ಈ ಪೃಥ್ವಿಯ ಬರುತ್ತಿರುವ ರಾಜನಾಗಿದ್ದಾನೆ. ನಿಜವಾಗಿ ಆತನು ಈಗ ರಾಜನಲ್ಲವೆಂದು ಅದು ಹೇಳುವದಿಲ್ಲ. ಯಾಕೆಂದರೆ ಆತನು ನಮ್ಮ ರಾಜನಾಗಿದ್ದಾನೆ. ವಿಶ್ವಾಸಿಗಳ ರಾಜನು. ಇದೀಗ ಅದೊಂದು ಆತ್ಮೀಕ ರಾಜ್ಯವಾಗಿದೆ. ನಾವು ಹೇಗೆ ಈ ಲೋಕಕ್ಕೆ ಸಂಬಂಧಪಟ್ಟವರಲ್ಲವೋ ಹಾಗೆಯೇ ಅದು ಈ ಲೋಕದ ರಾಜ್ಯಕ್ಕೆ ಸಂಬಂಧಪಟ್ಟದ್ದಲ್ಲ. ಈ ಕಾರಣಕ್ಕಾಗಿಯೇ ನಾವು ಲೋಕಕ್ಕಿಂತ ಭಿನ್ನ ರೀತಿಯಲ್ಲಿ ವರ್ತಿಸುತ್ತೇವೆ. ನಮ್ಮ ಪೌರತ್ವವು ಪರಲೋಕದಲ್ಲಿದೆ. ನಮ್ಮ ಪುನರ್‌ಜನ್ಮವಾದ ಲೋಕದ, ಆ ಆತ್ಮವನ್ನು ನಾವು ಪ್ರತಿಬಿಂಬಿಸುತ್ತಿದ್ದೇವೆ. ಅಲ್ಲಿ ಯೇಸುವು ರಾಜನಾಗಿದ್ದಾನೆ. ಈ ಕಾರಣದಿಂದಲೇ ನಮ್ಮ ಸ್ತ್ರೀಯರು, ಪುರುಷರ ವಸ್ತ್ರಗಳನ್ನು ತೊಡುವದಿಲ್ಲ, ಅಥವಾ ಅವರ ಕೂದಲನ್ನು ಕತ್ತರಿಸುವದಿಲ್ಲ, ಅಥವಾ ಲೋಕವು ಬಹಳವಾಗಿ ಪ್ರೀತಿಸುವ ಈ ಎಲ್ಲಾ ಅಲಂಕರಿಸುವ ವಿಷಯಗಳನ್ನು ಮತ್ತು ಇತರ ಸಂಗತಿಗಳನ್ನು ಉಪಯೋಗಿಸುವದಿಲ್ಲ. ಈ ಕಾರಣಕ್ಕಾಗಿಯೇ ನಮ್ಮ ಪುರುಷರು ಮದ್ಯಪಾನ ಮಾಡುವದಿಲ್ಲ, ಧೂಮ್ರಪಾನಮಾಡುವದಿಲ್ಲ ಮತ್ತು ಪಾಪದಲ್ಲಿ ಮುಂದುವರಿಯುವದಿಲ್ಲ. ನಮ್ಮ ರಾಜ್ಯವು ಪಾಪದ ಮೇಲೆ ರಾಜ್ಯವಾಳುವ ರಾಜ್ಯವಾಗಿದೆ, ಮತ್ತು ನಮ್ಮಲ್ಲಿ ವಾಸಿಸಿರುವ ಕ್ರಿಸ್ತನ ಆತ್ಮದಲ್ಲಿರುವ ಸಾಮರ್ಥ್ಯದ ಮೂಲಕ ಅದು ಜಾರಿಯಲ್ಲಿದೆ. ಈ ಲೋಕದಲ್ಲಿರುವ ಪ್ರತೀ ಒಂದು ರಾಜ್ಯವು ತುಂಡರಿಸಲ್ಪಡುವದು, ಆದರೆ ನಮ್ಮ ರಾಜ್ಯವು ಉಳಿಯುವದು.

ಈಗ ನಾವು ಒಬ್ಬನೇ ಸತ್ಯ ದೇವರ ಬೇರೆ ಬೇರೆ ಕಾರ್ಯ ರೂಪಗಳು ಮತ್ತು ಪ್ರಕಟನೆಗಳ ವಿಷಯ ಮಾತಾಡುತ್ತಿದ್ದೆವು ಮತ್ತು ಒಂದು ವಚನದ ಅಧ್ಯಯನದಲ್ಲಿ ಆತನ ಮಹಿಮೆಯನ್ನು ನೋಡಿದೆವು. ಆದರೆ ಆತನು ಬುದ್ಧಿ ಶಕ್ತಿಯಿಂದ ಕಂಡುಕೊಳ್ಳಲಾರದಾತನು. ಆತನನ್ನು ಆತ್ಮೀಯ ರೀತಿಯಲ್ಲಿಯೇ ಕಂಡುಕೊಳ್ಳಬಹುದು; ಒಂದು ಆತ್ಮೀಯ ಪ್ರಕಟನೆಯಿಂದ. ದೇಹಧಾರಿಯಾಗಿ

ಕಾಣಿಸಿಕೊಂಡಿದ್ದ ಅದೇ ಯೇಸುವು, ಆ ಅಗ್ನಿ ಸ್ತಂಭಕ್ಕೆ ಹಿಂದೆ ಹೋದನು. ಆದರೆ ಆತ್ಮನ ರೀತಿಯಲ್ಲಿ ಆತನು ಪುನಹ ಹಿಂದೆ ಬಂದು ಮತ್ತು ಆತನ ಜನರ ಮಧ್ಯದಲ್ಲಿ ಜೀವಿಸುವನು ಎಂದು ಆತನು ವಾಗ್ದಾನಮಾಡಿದನು. ಮತ್ತು ಪಂಚಾಶತ್ತಮ ದಿನದಲ್ಲಿ, ಆ ಅಗ್ನಿಯ ಸ್ತಂಭವು ಕೆಳಗಿಳಿದು ಬಂದು ಮತ್ತೆ ಬೆಂಕಿಯ ನಾಲಿಗೆಗಳೋಪಾದಿಯಲ್ಲಿ, ವಿಂಗಡಿಸಿಕೊಂಡು ಪ್ರತಿಒಬ್ಬೊಬ್ಬರ ಮೇಲೆ ಕೂತುಕೊಂಡವು. ದೇವರು ಏನು ಮಾಡುತ್ತಿದ್ದನು? ಆತನು ಆ ಸಭೆಗೆ ತನ್ನನ್ನು ವಿಂಗಡಿಸಿಕೊಡುತ್ತಿದ್ದನು. ತನ್ನ ಒಂದು ಭಾಗವನ್ನು, ಆ ಎಲ್ಲಾ ಸ್ತ್ರೀ ಪುರುಷರಿಗೆ ಹಂಚಿಕೊಡುತ್ತಿದ್ದನು. ಆತನು ತಾನು ಏನು ಮಾಡುವೆನೆಂದು ಹೇಳಿದ್ದನೋ ಹಾಗೆಯೇ ತನ್ನನ್ನು ತಾನು ಆ ಸಭೆಯ ನಡುವೆ ಆತನು ವಿಭಾಗಿಸಿಕೊಂಡನು. ಯೋಹಾನ 14:16-23,- *ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ಬಲ್ಲಿರಿ; ಹೇಗೆಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ, ಮತ್ತು ನಿಮ್ಮೊಳಗೆ ಇರುವನು. ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ. ಇನ್ನು ಸ್ವಲ್ಪ ಕಾಲವಾದ ಮೇಲೆ ಲೋಕವು ನನ್ನನ್ನು ನೋಡುವದಿಲ್ಲ, ಆದರೆ ನೀವು ನನ್ನನ್ನು ನೋಡುವಿರಿ; ನಾನು ಬದುಕುವದರಿಂದ ನೀವೂ ಬದುಕುವಿರಿ. ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು ನಿಮ್ಮಲ್ಲಿಯೂ ಇರುವದನ್ನು ನೀವು ಆ ದಿನದಲ್ಲಿ ತಿಳಿದುಕೊಳ್ಳುವಿರಿ. ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರೀಯನಾಗಿರುವನು; ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು ಎಂದು ಹೇಳಿದನು. ಯೂದನು (ಇವನು ಇಸ್ಕರಿಯೋತನಲ್ಲ) - ಸ್ವಾಮೀ, ನೀನು ಲೋಕಕ್ಕೆ ಕಾಣಿಸಿಕೊಳ್ಳದೆ ನಮಗೆ ಮಾತ್ರ ಕಾಣಿಸಿಕೊಳ್ಳುವದಕ್ಕೆ ಏನು ಸಂಭವಿಸಿತು ಎಂದು ಕೇಳಿದಕ್ಕೆ ಯೇಸು ಅವನಿಗೆ - ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು. (ಆತನು ಹೇಳಿದ್ದೇನೆಂದರೆ ಆತನು ತಂದೆಯನ್ನು ಬೇಡಿಕೊಳ್ಳುವನು ಮತ್ತು ಆತನು ಅವರಿಗೆ ಬೇರೊಬ್ಬ ಸಹಾಯಕನನ್ನು ಕಳುಹಿಸುವನು. ಮತ್ತು ಆತನು ಈಗಾಗಲೇ ಅವರ ಸಂಗಡ ವಾಸಮಾಡುತ್ತಾನೆ. ಆದರೆ ಅವರ ಅಂತರ್ಯದಲ್ಲಿ ಅಲ್ಲ.) ಅದು ಕ್ರಿಸ್ತನಾಗಿದ್ದನು. ಮತ್ತು 23ನೆಯ ವಚನದಲ್ಲಿ, ಆತನ ಸ್ವಂತ ವಿಷಯವಾಗಿ ಮತ್ತು ತಂದೆಯ ವಿಷಯವಾಗಿ ಮಾತನಾಡುತ್ತಾ, ನಾವು ಬರುವೆವೆಂದು ಆತನು ಹೇಳಿದನು. ಅದು ಅಲ್ಲಿದೆ: ಆ ಆತ್ಮವು ಬರುತ್ತಲಿದೆ, ತಂದೆಯಂತೆ ಮತ್ತು*

*ಮಗನಂತೆ ಪ್ರಕಟಗೊಳ್ಳಲ್ಪಟ್ಟ ಅದೇ ದೇವರಾತ್ಮವು ಮತ್ತು ಇನ್ನೂ ಅನೇಕರಲ್ಲಿ ಅದು ಪ್ರಕಟಗೊಳ್ಳುತ್ತದೆ. ಒಬ್ಬನೇ ದೇವರು, ಆತ್ಮವಾಗಿರುವಾತನು.*

ಆದುದರಿಂದಲೇ, ಯಾವ ಮನುಷ್ಯನೂ ಬಂದು ಒಬ್ಬಪೋಪನು ಪವಿತ್ರ ಮನುಷ್ಯನು ಅಥವಾ ಒಬ್ಬ ಬಿಷೋಪನು ಪವಿತ್ರ ಮನುಷ್ಯನು ಎಂದು ಹೇಳಲಾರನು. ಪರಿಶುದ್ಧ ಮನುಷ್ಯನು ಕ್ರಿಸ್ತನಾಗಿದ್ದಾನೆ ಅದು ನಮ್ಮಲ್ಲಿರುವ ಪವಿತ್ರಾತ್ಮನು. ಒಬ್ಬ ಸಭೆಯ ಸದಸ್ಯನಿಗೆ ಹೇಳುವ ಯಾವ ಅಧಿಕಾರವಿಲ್ಲವೆಂದು, ಅಧಿಕಾರದಲ್ಲಿರುವವರು ಯಾವ ಧೈರ್ಯದಿಂದ ಹೇಳುತ್ತಾರೆ? ಪ್ರತೀ ಒಬ್ಬೊಬ್ಬನಿಗೂ ಏನಾದರೂ ಹೇಳುವ ಅಧಿಕಾರವಿದೆ. ಪ್ರತಿ ಒಬ್ಬನಿಗೂ ಕೆಲಸವಿದೆ, ಪ್ರತಿ ಒಬ್ಬನಿಗೂ ಒಂದು ಸೇವೆ ಇದೆ. ಪಂಚಾಶತ್ತಮದ ದಿನದಲ್ಲಿ ಪವಿತ್ರಾತ್ಮನು ಬಂದು ಪ್ರತಿ ಒಬ್ಬೊಬ್ಬನ ಮೇಲೆ ಎಂಗಡಿಸಿಕೊಂಡಿತು, ಕ್ರಿಸ್ತನು,- *ಆ ದಿನದಲ್ಲಿ ನಾನು ತಂದೆಯಲ್ಲಿಯೂ, ಮತ್ತು ನೀವು ನನ್ನಲ್ಲಿಯೂ ಮತ್ತು ನಾನು ನಿಮ್ಮಲ್ಲಿಯೂ ಇದ್ದೇನೆಂಬುದನ್ನು ತಿಳಿದುಕೊಳ್ಳುವಿರಿ.* ಯೋಹಾನ 14:20. ಎಂದು ಹೇಳಿದ ಮಾತು ನೆರವೇರುವಂತೆ ಇದು ಆಯಿತು.

ಆ ಶ್ರೇಷ್ಠನಾದ- ನಾನು, ಇರುವಾತನು, ಸರ್ವಶಕ್ತನಾದ ದೇವರು, ತನ್ನ ಸತ್ಯ ಸಭೆಯನ್ನು ತುಂಬಿಸಲು ಆತ್ಮನ ರೂಪದಲ್ಲಿ ಬಂದಿದ್ದಾನೆ. ಆತನಿಗೆ ತನಗೆಲ್ಲಿ ಹೋಗಲು ಇಷ್ಟವಿದೆಯೋ ಅಲ್ಲಿಗೆ ಹೋಗಲು ಅಧಿಕಾರವಿದೆ; ಮತ್ತು ತಾನು ಯಾರ ಮೇಲೆ ಇರಲು ಬಯಸುತ್ತಾನೋ ಅಲ್ಲಿರಲು ಅಧಿಕಾರವಿದೆ. ನಾವು ನಮ್ಮ ಮಧ್ಯದಲ್ಲಿ ಯಾರನ್ನೂ ಪವಿತ್ರ ಮನುಷ್ಯರು ಎಂದು ಮಾಡುವದಿಲ್ಲ; ಆದರೆ, ಕರ್ತನ ಎಲ್ಲಾ ನಿಜವಾದ ಸಭೆಯು ಪವಿತ್ರಾತ್ಮನ ಪ್ರಸನ್ನತೆಯ ಮೂಲಕ ಅದು ಪವಿತ್ರವಾಗಿದೆ. ಸಭೆಯು ತನ್ನಷ್ಟಕ್ಕೆ ತಾನೇ ಪವಿತ್ರವಲ್ಲ; ಅದು ಆತನು, ಪವಿತ್ರಾತ್ಮನೇ ಪವಿತ್ರನಾಗಿದ್ದಾನೆ.

ಈಗ ಅದುವೇ ಪ್ರಕಟನೆಯಾಗಿದೆ: ಯೇಸು ಕ್ರಿಸ್ತನು ದೇವರಾಗಿದ್ದಾನೆ. ಹಳೇ ಒಡಂಬಡಿಕೆಯ ಯೆಹೋವನು ಹೊಸ ಒಡಂಬಡಿಕೆಯ ಯೇಸುವಾಗಿದ್ದಾನೆ. ನೀನು ಎಷ್ಟೇ ಕಷ್ಟ ಪಟ್ಟು ಪ್ರಯತ್ನಮಾಡಿದ್ದಾಗ್ಯೂ, ಅಲ್ಲಿ ಮೂರು ದೇವರಿದ್ದಾ ರೆಂದು ನೀನು ಸಾಧಿಸಲು ಸಾಧ್ಯವಿಲ್ಲ. ಆದರೆ ಆತನು ಒಬ್ಬನೇ ಆಗಿದ್ದಾನೆ ಎಂಬ ಸತ್ಯವನ್ನು ನೀನು ತಿಳಿದುಕೊಳ್ಳುವಂತೆ ಮಾಡಲು, ಪವಿತ್ರಾತ್ಮನಿಂದಾಗುವ ಪ್ರಕಟನೆಯ ಅಗತ್ಯ ಸಹ ಇದೆ. ಹಳೇ ಒಡಂಬಡಿಕೆಯ ಯೆಹೋವನು, ಹೊಸ ಒಡಂಬಡಿ ಕೆಯ ಯೇಸುವು ಎಂದು ನೋಡಲು ಒಂದು ಪ್ರಕಟನೆಯ ಅಗತ್ಯವಿದೆ. ಸೈತಾನನು ಸಭೆಯ ಒಳಗೆ ನುಸುಳಿ, ಜನರನ್ನು ಈ ಸತ್ಯಕ್ಕೆ ಕುರುಡರನ್ನಾಗಿ ಮಾಡಿದನು. ಮತ್ತು ಅವರು ಅದಕ್ಕೆ ಕುರುಡರಾಗಿ ಮಾಡಲ್ಪಟ್ಟಾಗ, ರೋಮಿನ ಸಭೆಗೆ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುವದನ್ನು ನಿಲ್ಲಿಸಲು ಹೆಚ್ಚು ಸಮಯ ಹಿಡಿಯಲಿಲ್ಲ.

ಈ ದಿನಗಳಲ್ಲಿ ವಚನದ ಬಹಳವಾದ ವಿರೂಪತೆಯ ಮಧ್ಯದಲ್ಲಿ ನಾವಿರುವಾಗ ದೈವತ್ವದ ವಿಷಯದ ಸತ್ಯವನ್ನು ಅರಿತುಕೊಳ್ಳಲು, ಪವಿತ್ರಾತ್ಮನಿಂದಾಗುವ ನಿಜವಾದ ಪ್ರಕಟನೆಯ ಅಗತ್ಯವಿದೆ ಎಂದು ನಾನು ಒಪ್ಪುತ್ತೇನೆ. ಆದರೆ ಜಯ ಹೊಂದುವ, ಜಯ ಶೀಲವಾಗುವ ಸಭೆಯು ಪ್ರಕಟನೆಯ ಮೇಲೆ ಕಟ್ಟಲ್ಪಟ್ಟಿರುತ್ತದೆ. ಆದುದರಿಂದ ನಾವು ದೇವರು ತನ್ನ ಸತ್ಯವನ್ನು ನಮಗೆ ಪ್ರಕಟಮಾಡುವದನ್ನು ನಾವು ಕಾದುಕೊಂಡಿರಬಹುದು. ಹ್ಯಾಗೂ, ನೀರಿನ ದೀಕ್ಷಾಸ್ನಾನದ ವಿಷಯ ನಮಗೆ ಒಂದು ನಿಜವಾದ ಪ್ರಕಟನೆಯ ಅಗತ್ಯವಿರುವದಿಲ್ಲ. ಅದು ನೇರವಾಗಿ ನಿನಗೆ ಅಷ್ಟು ಸ್ಪಷ್ಟವಾಗಿರುತ್ತದೆ. ಒಂದು ನಿಮಿಷಕ್ಕಾದರೂ ಆ ಅಪೋಸ್ತಲರು ತಪ್ಪು ದಾರಿ ಹಿಡಿದು, ತಂದೆಯ ಮತ್ತು ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿರಿ ಎಂಬ ಕರ್ತನ ನೇರವಾದ ಆಜ್ಞೆಯನ್ನು ಬಿಟ್ಟು ಮತ್ತು ಬೇಕೆಂದೇ ಅವಿಧೇಯತ್ವವನ್ನು ಮಾಡಲು ಸಾಧ್ಯವಿರಬಹುದೇ? ಆ ಹೆಸರು ಏನೆಂದು ಅವರಿಗೆ ತಿಳಿದಿತ್ತು. ಮತ್ತು ಅಲ್ಲಿ ವಾಕ್ಯದಲ್ಲಿ ಒಂದೇ ಒಂದು ಸ್ಥಳದಲ್ಲಿ ಸಹ, ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಹೊರತು ಬೇರೆ ಯಾವ ರೀತಿಯಲ್ಲಿ ಯಾದರೂ ದೀಕ್ಷಾಸ್ನಾನಮಾಡಿಸಲಿಲ್ಲ. ಈ ಅಪೋಸ್ತಲರ ಕೃತ್ಯಗಳ ಪುಸ್ತಕವು, ಸಭೆಯನ್ನು ಕಾರ್ಯರೂಪದಲ್ಲಿ ತೋರಿಸುವ ಒಂದು ಪುಸಕವಾಗಿದೆ, ಮತ್ತು ಅವರು ಆ ರೀತಿಯಲ್ಲಿ ದೀಕ್ಷಾಸ್ನಾನಮಾಡಿದ್ದರೆ, ಆಗ ಅದುವೇ ದೀಕ್ಷಾಸ್ನಾನ ಮಾಡುವ ರೀತಿಯಾಗಿರುತ್ತದೆ ಎಂದು ಕೇವಲ ಸಾಮಾನ್ಯ ಪ್ರಜ್ಞೆಯು ಕೂಡಾ ನಿನಗೆ ಹೇಳುತ್ತದೆ. ಈಗ ಇದು ಬಹಳ ಕಷ್ಟವಾದ ಮಾತು ಎಂದು ನೀನು ನೆನಸುವದಾದರೆ, ನೀನು ಇದರ ವಿಷಯ ಏನು ಯೋಚಿಸುತ್ತೀ? ಯಾವನೇ ಆದರೂ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಹೊಂದಿರದಿದ್ದರೆ, ಅವನು ಇನ್ನೊಂದು ಸಾರೆ ದೀಕ್ಷಾಸ್ನಾನವನ್ನು ಹೊಂದಬೇಕು.

ಅಪೋಸ್ತಲರ ಕೃತ್ಯ 19: 1-6,- *ಅಪೊಲ್ಲೋಸನು ಕೊರಿಂಥದಲ್ಲಿದ್ದಾಗ ಪೌಲನು ಮಲೆನಾಡಿನಲ್ಲಿ ಸಂಚಾರಮಾಡಿ ಎಫೆಸಕ್ಕೆ ಬಂದು ಕೆಲವು ಮಂದಿ ಶಿಷ್ಯರನ್ನು ಕಂಡು- ನೀವು ನಂಬಿದಾಗ ಪವಿತ್ರಾತ್ಮ ವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ- ಇಲ್ಲ, ಪವಿತ್ರಾತ್ಮವರವು ಉಂಟೆಂಬದನ್ನೇ ನಾವು ಕೇಳಲಿಲ್ಲ ಅಂದರು. ಅವನು - ನೀವು ಯಾವದನ್ನು ನಂಬಿ ದೀಕ್ಷಾಸ್ನಾನಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು - ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರು. ಆದಕ್ಕೆ ಪೌಲನು - ಯೋಹಾನನು ದೇವರ ಕಡೆಗೆ ತಿರಿಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿನಲ್ಲಿ ನಂಬಿಕೆ ಇಡಬೇಕೆಂಬದಾಗಿ ಜನರಿಗೆ ಹೇಳಿದನು ಎಂದು ಹೇಳಲು ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು;*

*ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು.* ಅದು ಹಾಗಿದೆ. ಎಫೆಸದಲ್ಲಿದ್ದ ಈ ಉತ್ತಮರಾದ ಜನರು, ಬರಲಿರುವ ಮೆಸ್ಸೀಯನ ವಿಷಯ ಕೇಳಿದ್ದರು. ಯೋಹಾನನು, ಆತನ ವಿಷಯವಾಗಿ ಬೋಧಿಸಿದ್ದನು. ಪಾಪಗಳ ಕ್ಷಮಾಪಣೆಗೋಸ್ಕರ (ಪ್ರಾಯಶ್ಚಿತ್ತಕ್ಕಾಗಿ) ಅವರು ದೀಕ್ಷಾಸ್ನಾನಮಾಡಿಸಿಕೊಂಡು ಯೇಸುವಿನ ಮೇಲೆ ವಿಶ್ವಾಸವಿಡುವದಕ್ಕೋಸ್ಕರ ಅವರು ಮುನ್ನೋಡುತ್ತಿದ್ದರು. ಆದರೆ ಈಗ ಅದು ಯೇಸುವನ್ನು ನೋಡಿ, ಪಾಪಗಳ ನಿವಾರಣೆಗೋಸ್ಕರ ದೀಕ್ಷಾಸ್ನಾನ ಹೊಂದಬೇಕಾದ ಸಮಯವಾಗಿತ್ತು. ಅದು ಪವಿತ್ರಾತ್ಮನನ್ನು ಹೊಂದಿಕೊಳ್ಳುವ ಸಮಯವಾಗಿತ್ತು. ಮತ್ತು ಅವರು ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ, ಪೌಲನು ಅವರ ಮೇಲೆ ತನ್ನ ಕೈಗಳನ್ನಿಟ್ಟನು, ಮತ್ತು ಪವಿತ್ರಾತ್ಮವು ಅವರ ಮೇಲೆ ಬಂತು.

ಓ, ಎಫೆಸದ ಪ್ರೀಯ ಜನರು ಬಹಳ ಒಳ್ಳೆಯ ಜನರಾಗಿದ್ದರು; ಮತ್ತು ಯಾರಿಗಾದರೂ ತಾವು ಸುರಕ್ಷಿತರಾಗಿದ್ದೇವೆಂದು ಎಣಿಸಿಕೊಳ್ಳುವ ಹಕ್ಕಿದ್ದರೆ, ಅದು ಅವರಿಗಿತ್ತು. ಅವರು ಎಷ್ಟರವರೆಗೆ ಬಂದಿದ್ದರೆಂದು ನೋಡಿರಿ. ಬರಲಿರುವ ಮೆಸ್ಸೀಯನನ್ನು ಸ್ವೀಕರಿಸುವಷ್ಟರ ಮಟ್ಟಿಗೆ ಅವರು ಬಂದಿದ್ದರು. ಅವರು ಆತನಿಗೋಸ್ಕರ ತಯಾರಾಗಿದ್ದರು. ಆದರೆ ಹಾಗಿದ್ದರೂ ಅವರು ಆತನನ್ನು ಕಂಡುಕೊಳ್ಳಲು ಅಶಕ್ತರಾದರು ಎಂದು ನೀವು ನೋಡುವದಿಲ್ಲವೋ? ಆತನು ಬಂದು ಹೋಗಿದ್ದನು. ಅವರಿಗೆ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅಗತ್ಯವಿತ್ತು. ಅವರಿಗೆ ಪವಿತ್ರಾತ್ಮನಿಂದ ತುಂಬಿಸಲ್ಪಡುವ ಅಗತ್ಯವಿತ್ತು.

ನೀವು ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರೆ, ದೇವರು ನಿಮ್ಮನ್ನು ತನ್ನ ಆತ್ಮದಿಂದ ತುಂಬಿಸುವನು. ಅದು ದೇವರ ವಾಕ್ಯವಾಗಿದೆ. ಅಪೊಸ್ತಲರ ಕೃತ್ಯ 19:6ರಲ್ಲಿ ನಾವು ಓದುವಂಥದು ಅದು ಅ.ಕೃ. 2:38ರ ಪರಿಪೂರ್ಣತೆಯಾಗಿದೆ. *ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ.* ನೋಡಿರಿ, ಪೇತ್ರನು ಪವಿತ್ರಾತ್ಮನ ಮೂಲಕವಾಗಿ ಏನನ್ನು ಹೇಳಿದ್ದನೋ, ಸರಿಯಾಗಿ ಅದನ್ನೇ ಪವಿತ್ರಾತ್ಮನ ಮೂಲಕವಾಗಿ ಪೌಲನು ಹೇಳಿದನು. ಮತ್ತು ಆ ಹೇಳಿದಂಥ ವಿಷಯವು ಬದಲಾಗಲಾರದು. ಅದು ಪಂಚಾಶತ್ತಮ ದಿನದಿಂದ ಹಿಡಿದು ಅತೀ ಕೊನೆಯ ಆರಿಸಲ್ಪಟ್ಟ ವಿಶ್ವಾಸಿಯು ದೀಕ್ಷಾಸ್ನಾನ ತೆಗೆದುಕೊಳ್ಳುವವರೆಗೆ ಅದು ಸ್ಥಿರವಾಗಿರಲೇಬೇಕು. *ಆದರೂ ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದದ್ದನ್ನು ನಾವೇ ಆಗಲಿ, ಪರಲೋಕದಿಂದ ಬಂದ ದೇವದೂತನೇ ಆಗಲಿ ನಿಮಗೆ ಸಾರಿದರೆ ಶಾಪ ಗ್ರಸ್ತನಾಗಲಿ.* ಗಲಾತ್ಯ 1:8.

ಈಗ ಏಕತ್ವದವರಾದ ನಿಮ್ಮಲ್ಲಿ ಕೆಲವರು ತಪ್ಪಾಗಿ ದೀಕ್ಷಾಸ್ನಾನವನ್ನು ಕೊಡುತ್ತಿದ್ದೀರಿ. ನೀರಿನಲ್ಲಿ ಮುಳುಗಿಸುವಂಥಾದ್ದು ನಿಮ್ಮನ್ನು ರಕ್ಷಿಸುತ್ತದೋ ಎಂಬಂತೆ, ನೀವು ಪುನರ್‌ಜನ್ಮಕ್ಕೋಸ್ಕರ ದೀಕ್ಷಾಸ್ನಾನವನ್ನು ಕೊಡುತ್ತೀರಿ. ಹೊಸ ಸೃಷ್ಟಿಯು ನೀರಿನಿಂದ ಬರುವದಿಲ್ಲ; ಅದು ಆತ್ಮನ ಕಾರ್ಯವಾಗಿದೆ ... ನಿಮ್ಮಲ್ಲಿ *ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ.* ಎಂದು ಪವಿತ್ರಾತ್ಮನ ಮೂಲಕವಾಗಿ ಅಪ್ಪಣೆ ಕೊಟ್ಟಂಥ ಮನುಷ್ಯನು, ನೀರು ಪುನರ್‌ಜನ್ಮವನ್ನು ಕೊಡುತ್ತದೆ ಎಂದು ಹೇಳಲಿಲ್ಲ. ಅದು ಕೇವಲ ಒಂದು ಒಳ್ಳೇ ಮನಸ್ಸಾಕ್ಷಿಬೇಕೆಂದು ದೇವರನ್ನು ಬೇಡಿಕೊಳ್ಳು ವಂಥಾದ್ದಾಗಿದೆ ಎಂದು ಹೇಳಿದ್ದಾನೆ. ಅದು ಅಷ್ಟೇ ಆಗಿದೆ. 1 ಪೇತ್ರ 3:21,- *ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈ ಕೊಳೆಯನ್ನು ಹೋಗಲಾಡಿಸುವಂಥದ್ದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿ ಕೊಳ್ಳುವಂಥಾದ್ದೇ.* ನಾನು ಅದನ್ನು ನಂಬುತ್ತೇನೆ.

ನೀರಿನ ದೀಕ್ಷಾಸ್ನಾನವು ಕರ್ತನಾದ ಯೇಸು ಕ್ರಿಸ್ತನ ಮೇಲೆ ಹೊರತು ಬೇರೆ ಯಾವ ರೀತಿಯಲ್ಲಿಯೂ ಇರಬಹುದೆಂಬದಾಗಿ ಚರಿತ್ರೆಯು ಸಾಧಿಸಿ ತೋರಿಸಬಲ್ಲುದು, ಎಂಬ ಯಾವದಾದರೂ ಸುಳ್ಳಾದ ಅಭಿಪ್ರಾಯವು ಯಾರಿಗಾದರೂ ಇರುವದಾದರೆ, ನೀವು ನಿಮ್ಮಷ್ಟಕ್ಕೆಯೇ ಚರಿತ್ರೆಯನ್ನು ಓದಿಕೊಳ್ಳ ಬೇಕೆಂದು ನಾನು ನಿಮ್ಮನ್ನು ಉಪದೇಶಿಸುತ್ತೇನೆ. ಕೆಳಗೆ ನಮೂದಿಸಿದ ವಿಷಯವು ರೋಮಿನಲ್ಲಿ ಕ್ರಿಸ್ತ ಶಕ 100ನೇ ಇಸವಿಯಲ್ಲಿ ನಡೆದಂಥ ಮತ್ತು ದಶಂಬರ 5, 1955ರಂದು ಟೈಮ್ಸ್ ಪತ್ರಿಕೆಯಲ್ಲಿ ಪುನರುತ್ಪಾದಿಸಿದ ಒಂದು ದೀಕ್ಷಾಸ್ನಾನದ ನಿಜ ದಾಖಲೆಯಾಗಿದೆ.- ಆ ಸಭಾ ಸೇವಕನು ತನ್ನ ಕೈಯನ್ನು ಎತ್ತಿದನು, ಮತ್ತು ಪಬ್ಲಿಯಸ್ ಡಿಶಿಯಸ್ ಎಂಬಾತನು ದೀಕ್ಷಾಸ್ನಾನದ ಬಾಗಿಲಿನಿಂದ ಹೆಜ್ಜೆಯಿಟ್ಟುಕೊಂಡು ಬಂದನು. ಆ ಕೊಳದಲ್ಲಿ ಸೊಂಟದವರೆಗಿನ ನೀರಿನಲ್ಲಿ ಮರದ ವ್ಯಾಪಾರಿಯಾದ ಮಾರ್ಕುಸ್ ವಾಸ್ಕಾ ಎಂಬಾತನು ನಿಂತುಕೊಂಡಿದ್ದನು. ಪಬ್ಲಿಯಸ್ ತನ್ನ ಬಳಿಗೆ ನೀರಿನಲ್ಲಿ ನಡೆದು ಬರುವದನ್ನು ಅವನು ಹಸನ್ಮುಖನಾಗಿ ನೋಡುತ್ತಿದ್ದನು. ಕ್ರೆಡಿಸ್?- ಎಂದು ಅವನು ಕೇಳಿದಾಗ ಪಬ್ಲಿಯಸ್ ಕ್ರೆಡೋ ಎಂಬದಾಗಿ ಉತ್ತರ ಕೊಟ್ಟನು. ನನ್ನ ರಕ್ಷಣೆಯು, ಪೊಂತ್ಯ ಪಿಲಾತನ ಆಧಿಪತ್ಯದಲ್ಲಿ, ಕ್ರೂಜೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನ ಮೂಲಕ ಬರುತ್ತದೆಂದು ನಾನು ನಂಬುತ್ತೇನೆ. ಆತನೊಂದಿಗೆ ನಾನು ನಿತ್ಯಜೀವವನ್ನು ಹೊಂದಬೇಕೆಂದು ಆತ ನೊಂದಿಗೆ ನಾನು ಸತ್ತೆನು. ಆಗ ಅವನು ತನ್ನನ್ನು ತಾನು ಆ ಕೊಳಕ್ಕೆ ಹಿಂದೆ ಬೀಳಲು ಬಿಟ್ಟಾಗ ಬಲವುಳ್ಳ ತೋಳುಗಳು ತನ್ನನ್ನು ಹಿಡಿದಿರುವ ದನ್ನೂ ಮತ್ತು ಆ ತಣ್ಣಗಾದ ನೀರು ಅವನನ್ನು ಮುಚ್ಚುತ್ತಿರುವಾಗ ಅವನ ಕಿವಿಗಳಲ್ಲಿ ಮಾರ್ಕುಸ್‌ನ ಸ್ವರವು - ನಾನು ನಿನ್ನನ್ನು ಕರ್ತನಾದ ಯೇಸು ಕ್ರಿಸ್ತನ ಹೆಸರಿನಮೇಲೆ ದೀಕ್ಷಾಸ್ನಾನಮಾಡಿಸುತ್ತೇನೆ ಎಂದು ಹೇಳುವದನ್ನು ಕೇಳಿದನು.

ಈ ಸತ್ಯವು ಕಳೆದು ಹೋದ ಸಮಯದವರೆಗೆ, ಅವರು ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿದರು. (ಮತ್ತು ಈ ಅಂತ್ಯ ಸಮಯದ ವರೆಗೆ ಆ ಸತ್ಯವು ಹಿಂದಿರುಗಲಿಲ್ಲ. ಇದು ನೈಸೀಯ ಕೌನ್ಸಿಲ್‌ನಿಂದ ಈ ಶತಮಾನದ (ಪ್ರಾರಂಭದ)ವರೆಗೆ ಆದರೆ ಅದು (ಈಗ) ಹಿಂದೆ ಬಂದಿದೆ. ಆತ್ಮವು ಈ ಪ್ರಕಟನೆಯನ್ನು ಕೊಡಲು ಬಯಸುತ್ತಿರುವಾಗ, ಸೈತಾನನು ಅದನ್ನು ಮುಚ್ಚಿಡಲು ಸಾಧ್ಯವಿಲ್ಲ.

ಹೌದು ಅಲ್ಲಿ ಮೂರು ದೇವರುಗಳು ಇರುತ್ತಿದ್ದರೆ, ನೀವು ಒಬ್ಬ ತಂದೆ ಗೋಸ್ಕರ, ಮತ್ತು ಒಬ್ಬ ಮಗನಿಗೋಸ್ಕರ ಮತ್ತು ಒಬ್ಬ ಪವಿತ್ರಾತ್ಮನಿ ಗೋಸ್ಕರ ಬಹಳ ಒಳ್ಳೇ ರೀತಿಯಲ್ಲಿ ದೀಕ್ಷಾಸ್ನಾನ ಮಾಡಿಸಬಹುದಿತ್ತು. ಆದರೆ ಯೋಹಾನನಿಗೆ ಕೊಡಲ್ಪಟ್ಟ ಪ್ರಕಟನೆ ಏನೆಂದರೆ, ಅಲ್ಲಿ ಒಬ್ಬನೇ ದೇವರು ಇದ್ದಾನೆ ಮತ್ತು ಆತನ ಹೆಸರು ಕರ್ತನಾದ ಯೇಸು ಕ್ರಿಸ್ತನು. ಮತ್ತು ನೀವು ಒಬ್ಬ ದೇವರಿಗೋಸ್ಕರ ದೀಕ್ಷಾಸ್ನಾನಮಾಡಿಸುತ್ತೀರಿ ಮತ್ತು ಕೇವಲ ಒಬ್ಬನೇ. ಈ ಕಾರಣದಿಂದಾಗಿಯೇ ಪಂಚಾಶತ್ತಮ ದಿನದಲ್ಲಿ ಪೇತ್ರನು ಆ ರೀತಿ ದೀಕ್ಷಾಸ್ನಾನಮಾಡಿಸಿದನು. ಅವನು ಆ ಪ್ರಕಟನೆಗೆ ನಂಬಿಗಸ್ತನಾಗಿರ ಬೇಕಾಗಿತ್ತು. ಅದೇನೆಂದರೆ, - *ಆದುದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ (ಕರ್ತನನ್ನಾಗಿಯೂ) ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ.* ಕರ್ತನಾದ ಯೇಸು ಕ್ರಿಸ್ತನು - ಆತನು ಅಲ್ಲಿದ್ದಾನೆ.

ಯೇಸುವು- ಕರ್ತನು ಮತ್ತು ಕ್ರಿಸ್ತನು ಇಬ್ಬರೂ ಆಗಿರುವದಾದರೆ, ಆಗ ಆತನು (ಯೇಸುವು) ದೇಹಧಾರಿಯಾದ ಒಬ್ಬನೇ ವ್ಯಕ್ತಿಯಲ್ಲಿ ಇರುವ-ತಂದೆ, ಮಗ ಮತ್ತು ಪವಿತ್ರಾತ್ಮವಲ್ಲದೆ ಬೇರೆ ಏನಾದರೂ ಆಗಿರಲು ಸಾಧ್ಯವಿಲ್ಲ. ಅದು ದೇವರು, ಮೂರು ವ್ಯಕ್ತಿಗಳಲ್ಲಿ - ಮಹಿಮೆಯುಳ್ಳ ತ್ರಿತ್ವವಾಗಿಲ್ಲ. ಆದರೆ ಮೂರು ಮಹತ್ತಾದ ಶೀರ್ಷಿಕೆಗಳುಳ್ಳ (titles) ಒಬ್ಬನೇ ದೇವರು, ಒಬ್ಬನೇ ವ್ಯಕ್ತಿ ಮತ್ತು ಆ ಮೂರು ಶೀರ್ಷಿಕೆಗಳು ಮೂರು ಕಾರ್ಯರೂಪ (offices)ಗಳಲ್ಲಿ ಪ್ರದರ್ಶಿಸಲ್ಪಡುತ್ತವೆ. ಇದನ್ನು ಇನ್ನೊಂದು ಸಾರೆ ಲಕ್ಷ್ಯವಿಟ್ಟು ಕೇಳಿರಿ. ಅದೇ ಯೇಸುವು- ಕರ್ತನೂ ಮತ್ತು ಕ್ರಿಸ್ತನೂ ಆಗಿದ್ದಾನೆ. ಕರ್ತನು(ತಂದೆ) ಮತ್ತು ಕ್ರಿಸ್ತನು (ಪವಿತ್ರಾತ್ಮ), ಯೇಸುವಾಗಿದ್ದಾರೆ, ಯಾಕಂದರೆ ಆತನು (ಯೇಸುವು) ಅವರಿಬ್ಬರೂ ಆಗಿದ್ದಾನೆ. (ಕರ್ತನು ಮತ್ತು ಕ್ರಿಸ್ತನು)

ಇದು ನಮಗೆ ದೈವತ್ವದ ನಿಜವಾದ ಪ್ರಕಟನೆಯನ್ನು ತೋರಿಸ ಲೊಲ್ಲ ದಾದರೆ, ಬೇರಾವುದೂ ನಮಗೆ ತೋರಿಸದು. ಕರ್ತನೆಂದರೆ ಬೇರೆಯಲ್ಲ; ಕ್ರಿಸ್ತನೆಂದರೆ ಬೇರೆಯಲ್ಲ. ಈ ಯೇಸುವೇ ಕರ್ತನಾದ ಯೇಸು ಕ್ರಿಸ್ತನು-ಒಬ್ಬನೇ ದೇವರು.

ಫಿಲಿಪ್ಪನು ಒಂದು ದಿನ ಯೇಸುವಿಗೆ ಹೀಗೆ ಹೇಳಿದನು,- *ಸ್ವಾಮೀ, ನಮಗೆ ತಂದೆಯನ್ನು ತೋರಿಸು, ನಮಗೆ ಅಷ್ಟೇ ಸಾಕು ಅಂದನು. ಯೇಸು ಅವನಿಗೆ ಫಿಲಿಪ್ಪನೇ, ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ ನೀನು ಇನ್ನೂ ನನ್ನನ್ನು ಅರಿತುಕೊಳ್ಳಲಿಲ್ಲವೇ ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ; ನಮಗೆ ತಂದೆಯನ್ನು ತೋರಿಸೆಂದು ನೀನು ಹೇಳುವದು ಹೇಗೆ? ನಾನು ಮತ್ತು ತಂದೆಯು ಒಂದಾಗಿದ್ದೇವೆ.*ನಾನು ಇದನ್ನು ಒಂದು ಸಾರೆ ಬೋಧಿಸಿದೆನು ಮತ್ತು ಒಬ್ಬಾಕೆ ಸ್ತ್ರೀ ಹೇಳಿದ್ದು,- ಒಂದು ನಿಮಿಷ, ಮಹನೀಯ ಬ್ರಾನ್ ಹಾಮರೇ, ನೀವು ಮತ್ತು ನಿಮ್ಮ ಪತ್ನಿ ಒಂದಾಗಿದ್ದೀರಿ.

ನಾನು,- ಆ ರೀತಿಯಲ್ಲ ಎಂದು ಹೇಳಿದೆನು.

ಆಕೆ,- ನನ್ನನ್ನು ಕ್ಷಮಿಸಿರಿ?ಎಂದು ಹೇಳಿದಳು.

ಹಾಗಾಗಿ ನಾನು ಆಕೆಗೆ,- ನೀನು ನನ್ನನ್ನು ನೋಡುತ್ತೀಯೋ? ಎಂದು ಕೇಳಿದೆನು.

ಆಕೆ ಹೇಳಿದ್ದು, - ಹೌದು.

ನಾನು, - ನೀನು ನನ್ನ ಪತ್ನಿಯನ್ನು ನೋಡುತ್ತೀಯೋ? ಎಂದು ಕೇಳಿದೆನು.

ಆಕೆ ಹೇಳಿದ್ದು, - ಇಲ್ಲ.

ನಾನು,- ಹಾಗಾದರೆ ಆ ಏಕತ್ವವು ಬೇರೆ ರೀತಿಯದಾಗಿದೆ, ಯಾಕಂದರೆ - ನೀವು ನನ್ನನ್ನು ನೋಡುವಾಗ, ನೀವು ತಂದೆಯನ್ನು ನೋಡುವಿರಿ, ಎಂದು ಆತನು ಹೇಳಿದ್ದಾನೆ ಎಂದು ಹೇಳಿದೆನು.

ಸಂಧ್ಯಾವೇಳೆಯಲ್ಲಿ ಬೆಳಕಾಗುವದು ಎಂದು ಪ್ರವಾದಿಯು ಹೇಳಿದ್ದಾನೆ. ಗೀತದಲ್ಲಿ ಈ ರೀತಿಯಾಗಿ ಬರೆದದೆ:

ಅಲ್ಲಿ ಸಂಧ್ಯಾವೇಳೆಯಲ್ಲಿ ಬೆಳಕಾಗುವದು, ಮಹಿಮೆಯ ದಾರಿಯನ್ನು ನೀನು ಖಂಡಿತವಾಗಿ ಕಂಡುಕೊಳ್ಳುವಿ,

ಈ ದಿನದ ಬೆಳಕು, ಅದು ನೀರಿನ ಮಾರ್ಗದಲ್ಲಿದೆ,

ಯೇಸುವಿನ ಅಮೂಲ್ಯ ಹೆಸರಿನಲ್ಲಿ ಹೂಣಲ್ಪಡುವದೇ.

ಯೌವನಸ್ಥರೇ, ಪ್ರಾಯಸ್ಥರೇ, ನಿಮ್ಮೆಲ್ಲ ಪಾಪಗಳಿಗಾಗಿ ಪಶ್ಚಾತ್ತಾಪಪಡಿರಿ,

ಪವಿತ್ರಾತ್ಮನು ಖಂಡಿತವಾಗಿ ನಿಮ್ಮೊಳಗೆ ಬರುವನು. ಸಂಧ್ಯಾವೇಳೆಯ ಬೆಳಕು ಬಂದಿದೆ-

ದೇವರು ಮತ್ತು ಕ್ರಿಸ್ತನು ಒಂದೇ ಆಗಿದ್ದಾರೆ ಎಂಬುದೇ ಕಡು ಸತ್ಯವಾಗಿದೆ.

ಸ್ವಲ್ಪವೇ ಸಮಯದ ಹಿಂದೆ ನಾನು ಒಬ್ಬ ಯೆಹೂದ್ಯ ರಬ್ಬಿಯೊಂದಿಗೆ ಮಾತನಾಡುತ್ತಿದ್ದೆನು. ಅವನು ನನಗೆ,- ಅನ್ಯ ಜನರಾದ ನೀವು, ದೇವರನ್ನು ಮೂರು ಭಾಗಗಳಾಗಿ ತುಂಡುಮಾಡಿ ಒಬ್ಬ ಯೆಹೂದ್ಯನಿಗೆ ಕೊಡಲಾರಿರಿ. ಅದಕ್ಕಿಂತ ಉತ್ತಮವಾದದ್ದನ್ನು ನಾವು ತಿಳಿದಿದ್ದೇವೆ, ಎಂದು ಹೇಳಿದನು.

ನಾನು ಅವನಿಗೆ,- ರಬ್ಬಿಯೇ, ಅದು ಅಷ್ಟು ಸರಿ. ನಾವು ದೇವರನ್ನು ಮೂರು ಭಾಗಗಳಲ್ಲಿ ತುಂಡುಮಾಡುವದಿಲ್ಲ. ನೀನು ಪ್ರವಾದಿಗಳನ್ನು ನಂಬುತ್ತೀ, ಅಲ್ಲವೇ? ಎಂದು ಕೇಳಿದೆನು.

ಅವನು,- ಖಂಡಿತವಾಗಿ ನಾನು ನಂಬುತ್ತೇನೆ. ಎಂದು ಹೇಳಿದನು.

ಯೇಶಾಯ 9:6ನ್ನು ನೀನು ನಂಬುತ್ತೀಯೋ?

ಹೌದು

ಆ ಪ್ರವಾದಿಯು ಯಾರ ವಿಷಯ ಮಾತಾಡುತ್ತಿದ್ದಾನೆ?

ಮೆಸ್ಸೀಯನು.

ಮೆಸ್ಸೀಯನಿಗೂ ದೇವರಿಗೂ ಯಾವ ಸಂಬಂಧವಿದೆ? ಎಂದು ನಾನು ಕೇಳಿದೆನು.

ಅವನು,- ಆತನು ದೇವರಾಗಿರುವಾತನು ಎಂದು ಹೇಳಿದನು.

ನಾನು,- ಅದು ಸರಿ. ಆಮೆನ್ ಎಂದು ಹೇಳಿದೆನು.

ನೀವು ದೇವರನ್ನು ಮೂರು ವ್ಯಕ್ತಿಗಳನ್ನಾಗಿ (ಅಥವಾ ಮೂರು ಭಾಗಗಳಾನ್ನಾಗಿ) ಮಾಡಲಾರಿರಿ. ಒಬ್ಬ ಯೆಹೂದ್ಯನಿಗೆ ನೀವು, ಅಲ್ಲಿ ಒಬ್ಬ ತಂದೆ, ಮತ್ತು ಒಬ್ಬ ಮಗನು ಮತ್ತು ಒಬ್ಬ ಪವಿತ್ರಾತ್ಮ ಇದೆ ಎಂದು ಹೇಳಲಾರಿರಿ. ಈ ಅಭಿಪ್ರಾಯ ಎಲ್ಲಿಂದ ಬಂತೆಂದು ಅವನು ನಿಮಗೆ ಕೂಡಲೇ ಹೇಳುವನು. ನೈಸಿಯಾ ಸಭೆಯಲ್ಲಿ ಈ (ಸಿದ್ಧಾಂತ) ವಿಶ್ವಾಸ ಪ್ರಮಾಣವು ಸ್ಥಾಪಿಸಲ್ಪಟ್ಟಿತೆಂದು ಯೆಹೂದ್ಯರಿಗೆ ತಿಳಿದದೆ. ನಾವು ಅನ್ಯ ಜನರೆಂದು ಅವರು ತಿರಸ್ಕಾರ ಮಾಡುವದರಲ್ಲಿ ಅಚ್ಚರಿಯೇನೂ ಇಲ್ಲ.

ಬದಲಾಗದ ಒಂದು ದೇವರ ವಿಷಯವಾಗಿ ನಾವು ಮಾತಾಡುತ್ತೇವೆ. ಯೆಹೂದ್ಯರು ಸಹ ಅದನ್ನೇ ನಂಬುತ್ತಾರೆ. ಆದರೆ ಸಭೆಯು ಅದರ ಬದಲಾಗದ ದೇವರನ್ನು, ಒಂದರಿಂದ ಮೂರಕ್ಕೆ ಬದಲಾಯಿಸಿತು. ಆದರೆ ಸಂಧ್ಯಾಕಾಲದಲ್ಲಿ ಬೆಳಕು ಹಿಂದಿರುಗುತ್ತಿದೆ. ಆದರೆ ಈ ಸತ್ಯವು, ಯೆಹೂದ್ಯರು- ಪೆಲಸ್ತೀನ ದೇಶಕ್ಕೆ

ಹಿಂದಿರುಗುವ ಸಮಯದಲ್ಲಿ ಬಂದಿದೆ ಎಂಬ (ಆಶ್ಚರ್ಯಕರವಾದ) ವಿಷಯ ಎಷ್ಟು ಎದ್ದು ಕಾಣುವ ಸಂಗತಿಯಾಗಿದೆ. ದೇವರು ಮತ್ತು ಕ್ರಿಸ್ತನು ಒಂದಾಗಿದ್ದಾರೆ. ಈ ಯೇಸುವು ಕರ್ತನೂ ಮತ್ತು ಕ್ರಿಸ್ತನೂ ಆಗಿದ್ದಾನೆ.

ಯೋಹಾನನಲ್ಲಿ ಆ ಪ್ರಕಟನೆ ಇತ್ತು, ಮತ್ತು ಯೇಸುವೇ ಆ ಪ್ರಕಟನೆಯಾಗಿದ್ದನು. ಮತ್ತು ಇಲ್ಲಿಯೇ ಈ ವಚನದಲ್ಲಿ ಆತನು ತನ್ನನ್ನು ತಾನು ತೋರಿಸಿಕೊಂಡನು-ನಾನು ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವವನೂ, ಸರ್ವಶಕ್ತನೂ ಆಗಿರುವಾತನಾಗಿದ್ದೇನೆ. ಆಮೆನ್.

ನಿನಗೆ ಈ ಪ್ರಕಟನೆಯು ಅರ್ಥವಾಗದಿದ್ದರೆ, ಮೇಲೆ ನೋಡು ಮತ್ತು ಅದಕ್ಕೋಸ್ಕರ ದೇವರನ್ನು ಬೇಡು. ನೀನು ಅದನ್ನು ಎಂದಾದರೂ ಪಡೆದುಕೊಳ್ಳಬೇಕಾದರೆ ಅದೊಂದೇ ಮಾರ್ಗವಾಗಿದೆ. ಒಂದು ಪ್ರಕಟನೆಯು ದೇವರಿಂದಲೇ ಬರಬೇಕಾಗಿದೆ. ಅದು ಎಂದೂ ಮನುಷ್ಯನ ಸ್ವಾಭಾವಿಕ ಪ್ರೌಢತ್ವದಿಂದ ಬರುವದಿಲ್ಲ. ಆದರೆ ಆತ್ಮೀಕ ದಾನದಿಂದ ಬರುತ್ತದೆ. ಒಂದು ವೇಳೆ ನೀನು ಎಲ್ಲಾ ವಚನಗಳನ್ನು ಬಾಯಿಪಾಠವಾಗಿ ಹೇಳಬಹುದು, ಮತ್ತು ಅದು ನಿಜವಾಗಿ ಆಶ್ಚರ್ಯಕರವಾಗಿದ್ದರೂ, ಅದು ಈ ರೀತಿ ಇರುವದಿಲ್ಲ. ಅದು ದೇವರಿಂದ ಬಂದ ಒಂದು ಪ್ರಕಟನೆಯಾಗಿರಲೇಬೇಕು. ವಾಕ್ಯದಲ್ಲಿ ಅದು ಈ ರೀತಿಯಾಗಿ ಹೇಳುತ್ತದೆ. ಅದೇನೆಂದರೆ *ಪವಿತ್ರಾತ್ಮನಿಂದಲ್ಲದೆ ಯಾವ ಮನುಷ್ಯನೂ ಯೇಸುವನ್ನು ಕ್ರಿಸ್ತನೆಂದು ಹೇಳಲಾರನು.* ನೀನು ಪವಿತ್ರಾತ್ಮನನ್ನು ಹೊಂದಿಕೊಳ್ಳಬೇಕು. ಅನಂತರ ಮತ್ತು ಅನಂತರವೇ ಯೇಸುವು ಕ್ರಿಸ್ತನಾಗಿದ್ದಾನೆ: ದೇವರು, ಅಭಿಷಿಕ್ತನಾದಾತನು ಎಂಬ ಪ್ರಕಟನೆಯನ್ನು ಆತ್ಮನು ನಿನಗೆ ಕೊಡುವನು.

ದೇವರ ಆತ್ಮನ ಹೊರತು ಮತ್ತು ದೇವರ ಆತ್ಮನು ಅದನ್ನು ಯಾರಿಗೆ ಪ್ರಕಟಿಸುತ್ತಾನೋ ಅವನ ಹೊರತು ಯಾವ ಮನುಷ್ಯನೂ ದೇವರ ವಿಷಯಗಳನ್ನು ತಿಳಿದುಕೊಳ್ಳಲಾರನು. ಲೋಕದಲ್ಲಿ ಇರುವ ಬೇರೆ ಎಲ್ಲಾ ವಿಷಯಗಳಿಗಿಂತ ಹೆಚ್ಚಾಗಿ ಪ್ರಕಟನೆಗೋಸ್ಕರ ನಾವು ದೇವರನ್ನು ವಿಜ್ಞಾಪಿಸಿಕೊಳ್ಳುವ ಅಗತ್ಯವಿದೆ. ನಾವು ಸತ್ಯವೇದವನ್ನು ಸ್ವೀಕರಿಸಿದ್ದೇವೆ. ಅದರ ಮಹಾ ಸತ್ಯಗಳನ್ನು ನಾವು ಅಂಗೀಕರಿಸಿದ್ದೇವೆ. ಆದರೆ ಅನೇಕ ಜನರಿಗೆ ಅದು ಇನ್ನೂ ನಿಜವಾಗಿ ಕಾಣಿಸುವದಿಲ್ಲ. ಯಾಕಂದರೆ ಆತ್ಮನಿಂದಾಗುವ ಪ್ರಕಟನೆಯು ಅಲ್ಲಿಲ್ಲ. ವಾಕ್ಯವು ಉತ್ತೇಜಿಸಲ್ಪಡಲಿಲ್ಲ. ದೇವರ ವಾಕ್ಯವು 2ನೇ ಕೊರಿಂಥ 5:21ರಲ್ಲಿ ಹೀಗೆ ಹೇಳುತ್ತದೆ, -ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪದ ಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗಮಾಡಿದನು. ನಿಮಗೆ ಇದರ ಅರ್ಥವಾಯಿತೋ? ಅದು ಹೇಳುತ್ತದೇನೆಂದರೆ ಕ್ರಿಸ್ತನಲ್ಲಿ ಇರುವದರ ಮೂಲಕ ನಾವು ಸ್ವತಹ ದೇವರ ಅದೇ ನೀತಿಯಾಗಿದ್ದೇವೆ. ಅದು ಏನು ಹೇಳುತ್ತದೇನೆಂದರೆ (ಯೇಸುವು)

ನಮಗೋಸ್ಕರ ಪಾಪವಾಗಿ ಮಾಡಲ್ಪಟ್ಟನು. ಆತನು ಪಾಪಿಯಾದನು ಎಂದು ಅದು ಹೇಳುವದಿಲ್ಲ. ಆದರೆ ಆತನೊಂದಿಗೆ ನಮ್ಮ ಮಿಲನದ ಮೂಲಕ ನಾವು ದೇವರ ನೀತಿಯಾಗುವಂತೆ ನಮಗೋಸ್ಕರ ಪಾಪವಾದನು. ನಮ್ಮ ಬದಲಾಗಿ ಆತನು ನಿಜವಾಗಿ ನಮಗೋಸ್ಕರ ಪಾಪವಾದನು ಎಂಬ ಸತ್ಯಾರ್ಥವನ್ನು ನಾವು ಸ್ವೀಕರಿಸುವದಾದರೆ (ಮತ್ತು ನಾವು ಹಾಗೆ ಮಾಡಲೇ ಬೇಕು) ಆಗ ನಾವು ಆತನೊಂದಿಗೆ ನಮ್ಮ ಮಿಲನದ ಮೂಲಕ ದೇವರ ಸ್ವಂತ ನೀತಿಯಾಗುತ್ತೇವೆ ಎಂಬ ಸತ್ಯಾರ್ಥವನ್ನೂ ನಾವು ಸ್ವೀಕರಿಸಲೇ ಬೇಕು. ಒಂದನ್ನು ತಿರಸ್ಕರಿಸುವ ದೆಂದರೆ ಇನ್ನೊಂದನ್ನೂ ತಿರಸ್ಕರಿಸುವೆವು. ಒಂದನ್ನು ಸ್ವೀಕರಿಸುವದಾದರೆ ಇನ್ನೊಂದನ್ನೂ ಸ್ವೀಕರಿಸುವೆವು. ಈಗ ದೇವರ ವಾಕ್ಯವು ಹಾಗೆ ಹೇಳುತ್ತದೆಂದು ನಮಗೆ ತಿಳಿದದೆ. ಅದನ್ನು ಒಪ್ಪದಿರಲು ಸಾಧ್ಯವಿಲ್ಲ. ಆದರೆ ಅದರ ಪ್ರಕಟನೆಯು ಅಲ್ಲಿಲ್ಲ. ಹೆಚ್ಚಾದ ದೇವರ ಮಕ್ಕಳಿಗೆ, ಅದು ಒಂದು ನಿಜ ಸಂಗತಿಯಲ್ಲ. ಅದು ಕೇವಲ ಸತ್ಯವೇದ ದಲ್ಲಿರುವ ಒಂದು ಒಳ್ಳೇ ವಾಕ್ಯವಾಗಿದೆ. ಆದರೆ ಅದು ನಮಗೋಸ್ಕರ ಜೀವಂತವಾಗಿ ಮಾಡಲ್ಪಡುವ ಅಗತ್ಯತೆ ನಮಗಿದೆ. ಅದಕ್ಕೆ ಒಂದು ಪ್ರಕಟನೆಯ ಅಗತ್ಯವಿದೆ.

ನಿಮ್ಮನ್ನು ಆಶ್ಚರ್ಯಗೊಳಿಸುವ ಮತ್ತು ನಿಮಗೆ ಸಹಾಯಮಾಡುವ ವಿಷಯ ಒಂದನ್ನು ನಾನು ಇಲ್ಲಿ ನಿಮ್ಮ ಮುಂದೆ ಇಡುವೆನು. ಹೊಸ ಒಡಂಬಡಿಕೆಯು ಮೂಲತಹ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು ಎಂದು ನಂಬದಿರುವ ಯಾವ ವಿದ್ಯಾರ್ಥಿಯೂ ಇರಲಿಕ್ಕಿಲ್ಲ. ನಮ್ಮ ಎಲ್ಲಾ ಸತ್ಯವೇದದ ಮಹಾ ಅಭ್ಯಾಸಕರು ಹೇಳಿದ್ದೇನೆಂದರೆ, ದೇವರು ಈ ಲೋಕಕ್ಕೆ ಮೂರು ಮಹಾ ಜನಾಂಗಗಳನ್ನು ಮೂರು ಮಹಾ ಕಾಣಿಕೆಗಳೊಂದಿಗೆ, ಸುವಾರ್ತಾ ಸಹಾಯಕ್ಕೋಸ್ಕರ ಕೊಟ್ಟಿದ್ದಾನೆ. ಆತನು ಸಾರ್ವತ್ರಿಕ ಭಾಷೆಯನ್ನು ಕೊಟ್ಟಂಥಾ ಗ್ರೀಕರನ್ನು ಕೊಟ್ಟಿದ್ದಾನೆ. ಆತನು ನಮಗೆ ನಿಜವಾದ ಧರ್ಮ ಮತ್ತು ರಕ್ಷಕನ (ಕ್ರಿಸ್ತನು) ಮೂಲಕ ದೇವರ ನಿಜವಾದ ಜ್ಞಾನವನ್ನು ಕೊಟ್ಟ ಯೆಹೂದ್ಯರನ್ನು ಕೊಟ್ಟಿದ್ದಾನೆ. ಆತನು ನಮಗೆ ಒಂದು ಕಾನೂನು ಬದ್ಧವಾದ ಏಕೀಕರಿಸಿದ ರಾಜ್ಯವನ್ನು ಮತ್ತು ರಾಜಮಾರ್ಗಗಳ ಒಂದು ಕ್ರಮಾವಳಿಯನ್ನು (ಪದ್ಧತಿ) ಕೊಟ್ಟ ರೋಮಾಯರನ್ನು ಕೊಟ್ಟಿದ್ದಾನೆ. ಹೀಗಾಗಿ ನಮ್ಮಲ್ಲಿ ನಿಜವಾದ ಧರ್ಮ, ಅದನ್ನು ಅನೇಕ ಜನರಿಗೆ ತಿಳಿಸಲು ಒಂದು ಭಾಷೆ, ಮತ್ತು ಅದನ್ನು ಭೌತಿಕವಾಗಿ ಪ್ರಸರಿಸಲು ಒಂದು ರಾಜ್ಯ ಸರಕಾರ ಮತ್ತು ಮಾರ್ಗಗಳು ಇವೆ. ಮತ್ತು ಚಾರಿತ್ರಿಕವಾಗಿ ಹೇಳುವದಾದರೆ ಇದು ಸರಿಯಾಗಿ ಸತ್ಯವೆಂದು ಕಂಡು ಬರುತ್ತದೆ. ಮತ್ತು ಈ ದಿನದ ನಮ್ಮ ಗ್ರೀಕ್ ವಿದ್ವಾಂಸರು ಹೇಳುವದೇನೆಂದರೆ, ಸತ್ಯವೇದ ದಿನಗಳ ಗ್ರೀಕ್ ಭಾಷೆಯು ಎಷ್ಟು ಪರಿಪೂರ್ಣ ಮತ್ತು ಸರಿಯಾಗಿದೆ ಎಂದರೆ, ಒಬ್ಬ ಗ್ರೀಕ್ ವಿದ್ಯಾರ್ಥಿಯು ನಿಪುಣನಾದ ಮತ್ತು ಸೂಕ್ಷ್ಮಬುದ್ಧಿಯ ವ್ಯಾಕರಣಗಾರ ನಾಗಿರುವದಾದರೆ, ಅವನು ಹೊಸ ಒಡಂಬಡಿಕೆಯ ವಚನವು ಸರಿಯಾಗಿ ಏನು

ಕಲಿಸುತ್ತದೆಂದು ನಿಜವಾಗಿ ತಿಳಿಯಬಹುದು. ಆದರೆ ಇದು ಒಂದು ಕೇವಲ ಒಂದು ತತ್ವಮಾತ್ರವೇ ಆಗಿಲ್ಲವೇ? ಇದು ಸತ್ಯವೋ? ಒಂದು ಸಂಪ್ರದಾಯ ಸಭೆಯ ಪ್ರತಿಯೊಂದು ಪ್ರಖ್ಯಾತ ಗ್ರೀಕ್ ವಿದ್ವಾಂಸನು, ಇನ್ನೊಂದು ಸಂಪ್ರದಾಯ ಸಭೆಯ ಇನ್ನೊಂದು ವಿದ್ವಾಂಸನೊಂದಿಗೆ ವಾಗ್ವಾದ ಮಾಡುವ ದಿಲ್ಲವೋ? ಮತ್ತು ಅವರ ವಾಗ್‌ವಿವಾದಗಳು, ಒಂದೇ ರೀತಿಯ ಗ್ರೀಕ್ ಶಬ್ದಗಳು ಮತ್ತು ಒಂದೇ ರೀತಿಯ ವ್ಯಾಕರಣದ ನಿಯಮಗಳ ಮೇಲೆ ಆಧಾರ ಗೊಂಡಿರುತ್ತವಲ್ಲವೇ? ನಿಜವಾಗಿ ಅದು ಹಾಗೆಯೇ ಇದೆ. ಬಹಳ ಹಿಂದೆ ಪೆರ್ಗಮದ ಸಭೆಯ ಯುಗದಲ್ಲಿ ಸಹ, ಕ್ರಿಸ್ತ ಶಕ 3:25ರ ನೈಸಿಯಾ ಕೌನ್ಸಿಲ್‌ನ ಸ್ವಲ್ಪ ಮೊದಲು, ಅಲ್ಲಿ ಅರಿಯಸ್ ಮತ್ತು ಅಥನೇಶಿಯಸ್ ಎಂಬ ಎರಡು ಮಹಾ ವಿದ್ವಾಂಸರಿದ್ದರು. ಇವರು ಒಂದು ಗ್ರೀಕ್ ಶಬ್ದದ ವಿಷಯವಾಗಿ, ಒಂದು ಸಿದ್ಧಾಂತದ ಜಗಳದಲ್ಲಿ ಬಿಗಿಯಲ್ಪಟ್ಟವರಾಗಿದ್ದರು. ಅವರ ವಾಗ್ವಾದವು ಎಷ್ಟು ತೀವ್ರ ಮತ್ತು ಎಷ್ಟು ಜಗತ್ ಪ್ರಸಿದ್ಧವಾಗಿತ್ತೆಂದರೆ, ಒಂದು ಡಿಪ್ಥಾಂಗ್‌ನ (ಒಂದೇ ಸ್ವರವುಳ್ಳ ಎರಡು ಅಕ್ಷರಗಳ) ಉಚ್ಚಾರದ ವಿಷಯವಾಗಿ ಲೋಕವು ಎರಡು ವಿಭಾಗವಾಗಿತ್ತು ಎಂದು ಚರಿತ್ರೆಗಾರರು ಹೇಳಿದ್ದಾರೆ. ಈಗ ಗ್ರೀಕ್ ಭಾಷೆಯು ಅಷ್ಟು ಪರಿಪೂರ್ಣವಾಗಿರುವದಾದರೆ, ಮತ್ತು ಅಷ್ಟು ದೇವರಿಂದ ಸ್ಥಾಪಿತ ವಾಗಿರುವದಾದರೆ, ಅಲ್ಲಿ ಅಂಥಹ ಒಂದು ವಾಗ್ವಿವಾದ ಯಾಕಿತ್ತು? ಖಂಡಿತವಾಗಿ, ನಾವೆಲ್ಲರು ಗ್ರೀಕ್ ಭಾಷೆಯನ್ನು ತಿಳಿಯಬೇಕೆಂದು ದೇವರು ಅಪೇಕ್ಷಿಸಲಿಲ್ಲ - ಈ ದಿನದಲ್ಲಿ ಸಹ ನಾವು ಗ್ರೀಕ್ ಭಾಷೆಯ ವಿಷಯ ಚರ್ಚೆಗಳನ್ನು ಮಾಡುತ್ತಿದ್ದೇವೆ. ಎಕ್ಸ್‌ರೇ ಮಾಡಲ್ಪಟ್ಟ ಕ್ರಿಸ್ತನ ಪಕ್ಷವಾತ ಹಿಡಿದ ಸಭೆ ಎಂಬ ಡಾ. ಮೇಕ್ ಕ್ರೋಸನ್‌ರವರು ಬರೆದ ಪುಸ್ತಕವನ್ನು ಉದಾಹರಣೆಗಾಗಿ ತೆಗೆದುಕೊಳ್ಳಿರಿ. ಅದರಲ್ಲಿ ಅನೇಕ ಪ್ರಸಿದ್ಧ ಗ್ರೀಕ್ ವ್ಯಾಕರಣಗಾರರ ಅನೇಕ ಬರಹಗಳನ್ನು ಮುಂದಿಡುತ್ತಾನೆ. ಮತ್ತು ಅವನು ತನ್ನದೇ ತೃಪ್ತಿಗಾಗಿ ಸಾಧಿಸಿ ತೋರಿಸುತ್ತಾನೇನೆಂದರೆ ಗ್ರೀಕ್ ವ್ಯಾಕರಣದ ಬದಲಾಗದ ನಿಯಮಗಳು ಒಟ್ಟಾಗಿ ಸಾಧಿಸುತ್ತವೇನೆಂದರೆ, ಒಬ್ಬ ಮನುಷ್ಯನು ಪುನರ್‌ಜನ್ಮ ದನಂತರ ಪವಿತ್ರಾತ್ಮದ ದೀಕ್ಷಾಸ್ನಾನವನ್ನು ಹೊಂದುತ್ತಾನೆ. ಸ್ತ್ರೀಯರು ವೇದಿಯನ್ನು ಹತ್ತಿ ಪ್ರಸಂಗಿಸಬಹುದು, ಯಾಕಂದರೆ ಪ್ರವಾದಿಸು ಎಂಬುದರ ಅರ್ಥವು ಉಪದೇಶಿಸು ಎಂಬದಾಗಿದೆ ಎಂದು ಸಹ ಅವನು ಯಾವ ಸಂಕೋಚ ವಿಲ್ಲದೆ ಹೇಳುತ್ತಾನೆ. ಆದರೆ ಅವನಷ್ಟೇ ಯೋಗ್ಯರಾದ ಇತರ ಗ್ರೀಕ್ ವಿದ್ಯಾರ್ಥಿಗಳಿಗೆ ಅವನು ಸಮರ್ಥಿಸಿತೋರಿಸಿದ್ದಾನೋ? ಎಂದೂ ಇಲ್ಲ. ನೀನು ಮಾಡಬೇಕಾಗಿರುವ ಎಲ್ಲಾ ವಿಷಯವೇನೆಂದರೆ, ಅದರ ವಿರುದ್ಧವಾದ ದೃಷ್ಟಿ ಕೋನವನ್ನು ಹೊಂದಿರುವ ಇತರ ವಿದ್ಯಾರ್ಥಿಗಳ ಪುಸ್ತಕಗಳನ್ನು ನೀನು ಓದು,
2 ಮತ್ತು ಅವರ ಅನುಭವದ ಬರಹಗಳನ್ನು ಕೇಳಿಸಿಕೊಳ್ಳು.

ನಾನು ಈಗಾಗಲೇ ಹೇಳಿದ ವಿಷಯವು ಸತ್ಯಮಾತ್ರವೇ ಅಲ್ಲ, ಆದರೆ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗೋಣ. ಆ ಮೂಲತಹವಾದ

ಬರಹಗಳು, ಯೇಸುವಿನ ಮತ್ತು ಆತನ ಸಮಯದ ಜನರ ಭಾಷೆಯಾಗಿದ್ದ ಆರಾಮ್ಯ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು ಎಂದು ಈ ಹೊತ್ತು ನಮ್ಮಲ್ಲಿ ಕೆಲವು ಸತ್ಯವೇದದ ವಿದ್ಯಾರ್ಥಿಗಳು ಹೇಳುತ್ತಾರೆ. ಅಷ್ಟು ಸಾಮಾನ್ಯವಾಗಿ ಎಣಿಸಲ್ಪಟ್ಟಂತೆ, ಆ ಜನರು ಗ್ರೀಕ್ ಭಾಷೆಯಲ್ಲಿ ಮಾತಾಡುತ್ತಿರಲಿಲ್ಲ ಮತ್ತು ಬರೆಯುತ್ತಿರಲಿಲ್ಲ ಎಂದು ಇವರು ಹೇಳುತ್ತಾರೆ. ನಿಜವಾಗಿ ನೋಡುವದಾದರೆ ನಮ್ಮ ಚರಿತ್ರೆಕಾರರು ಈ ವಿಷಯದಲ್ಲಿ ಬೇರೆ ಬೇರೆ ಅಭಿಪ್ರಾಯವನ್ನು ಹೊಂದಿದವರಾಗಿರುತ್ತಾರೆ. ಉದಾಹರಣೆಗಾಗಿ, ಬಹಳ ತೇಜಸ್ವಿಯಾದ, ವಿದ್ವಾಂಸನಾದ ಡಾಕ್ಟರ್ ಶೋನ್ ಫೀಲ್ಡ್, (ತನ್ನ) ಸಂಶೋಧನೆಯ ಮೂಲಕ, ತನ್ನ ತೃಪ್ತಿಗಾಗಿ ಸಾಧಿಸಿತೋರಿಸಿದ್ದೇನೆಂದರೆ - ಹೊಸ ಒಡಂಬಡಿಕೆಯು ಆ ದಿನದ ಗ್ರೀಕ್ ಭಾಷೆ ಮಾತಾಡುವ ಜನರ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಅವನ ಬಳಿಯಲ್ಲಿರುವ ಅನೇಕಾನೇಕ ಬರೆಯಲ್ಪಟ್ಟ ಪುರಾವೆಗಳ ಮೂಲಕವಾಗಿ, ಅವನ ನಂಬಿಕೆಗನುಸಾರವಾಗಿ ಅವನು ಒಂದು ಚಲೋದಾದ ದಾಖಲನ್ನು ಮಾಡುತ್ತಾನೆ. ಆದರೆ ಇನ್ನೊಂದು ಕಡೆಯಲ್ಲಿ ಇನ್ನೊಂದು ಪ್ರಖ್ಯಾತ ವಿದ್ವಾಂಸನಾದ ಡಾಕ್ಟರ್ ಲಾಮ್‌ಸಾರವರು ಹೊಸ ಒಡಂಬಡಿಕೆಯು ಆರಾಮ್ಯ ಭಾಷೆಯಲ್ಲಿ ಬರೆಯಲ್ಪಟ್ಟಿದೆ ಎಂದು ಖಂಡಿತವಾಗಿ ಹೇಳುತ್ತಾನೆ ಮತ್ತು ಅವನ ವಿವಾದವನ್ನು ಪ್ರತಿವಾದಿಸಲು, ಟೋಯಿನ್‌ಬೀ ಎಂಬ ತೇಜಸ್ವಿಯಾದ ಚರಿತ್ರೆಗಾರನು, ಆ ಜನರ ಭಾಷೆಯು ಗ್ರೀಕ್ ಆಗಿರದೆ ಆರಾಮ್ಯ ಭಾಷೆಯಾಗಿತ್ತು ಎಂದು ಹೇಳಿದ್ದಾನೆ. ಆದುದರಿಂದ ಹೊಸ ಒಡಂಬಡಿಕೆಯು ಮೊತ್ತ ಮೊದಲೇ ಆರಾಮ್ಯ ಭಾಷೆಯಲ್ಲಿ ಬರೆಯಲ್ಪಟ್ಟಿದ್ದುದು ಸಾಧ್ಯವಿದ್ದಂತೆ ಕಾಣುತ್ತದೆ.

ಹೇಗೂ, ಇದರ ವಿಷಯ ಇಷ್ಟಾಗಿ ಚಿಂತಿತರಾಗುವ ಮೊದಲು, ಅರಸನಾದ ಜೇಮ್ಸ್‌ನ ಅನುವಾದ ಮತ್ತು ಡಾ. ಲಾಮ್‌ಸಾರವರ ಅನುವಾದ ಎರಡನ್ನೂ ನಾವು ಓದೋಣ. ಎರಡರಲ್ಲಿಯೂ ವಚನಗಳು ಆಶ್ಚರ್ಯ ರೀತಿಯಲ್ಲಿ ಒಂದೇ ಆಗಿರುತ್ತದೆಂದು ನಮ್ಮ ತೃಪ್ತಿಗಾಗಿ ನಾವು ಕಂಡುಕೊಳ್ಳುತ್ತೇವೆ. ಆದುದರಿಂದ ನಿಜವಾಗಿ ಅಲ್ಲಿ ಅದರ ಸಾರಾಂಶದಲ್ಲಿ ಅಥವಾ ಸಿದ್ಧಾಂತದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಈಗಾಗಲೇ ನಾವು ತಿಳಿದಿರುವ ವಚನಗಳ, ಹೊಸತಾಗಿ ಕಂಡು ಹಿಡಿಯಲ್ಪಟ್ಟ ಸಂಶೋಧನೆಗಳು, ಮತ್ತು ಇತ್ತೀಚೆಗಿನ ಬಹಿರಂಗಗೊಳಿಸಲ್ಪಟ್ಟ ನಿಜಾರ್ಥಗಳು ಇವುಗಳಿಗೆ ದೇವರು ತಾನೇ ಅನುಮತಿ ಕೊಟ್ಟು, ಅವುಗಳು ನಮ್ಮ ಮುಂದೆ ಬಂದು, ನಾವು ಈಗಾಗಲೇ ತಿಳಿದಿದ್ದ ಸಂಗತಿಗಳು ಎಷ್ಟು ಸತ್ಯವಾಗಿದೆ ಎಂದು ನಮಗೆ ಸಾಧಿಸಿತೋರಿಸಲು ಇದನ್ನು ಮಾಡಿದ್ದಾನೆ ಎಂದು ನಾವು ಒಂದು ನಿರ್ಧಾರಕ್ಕೆ ಬರಬಹುದು. ಮತ್ತು ಅನುವಾದಗಾರರು ಒಬ್ಬರು ಇನ್ನೊಬ್ಬರೊಂದಿಗೆ ವಿವಾದಮಾಡಿದರೂ, ವಚನಗಳು ಹಾಗೆ ಮಾಡುವದಿಲ್ಲ ಎಂದು ನಾವು ಕಂಡುಕೊಳ್ಳುತ್ತೇವೆ.

ಈಗ, ಸತ್ಯವೇದವು ಬರೆಯಲ್ಪಟ್ಟ ಭಾಷೆಯ ಆಳವಾದ ತಿಳುವಳಿಕೆಯನ್ನು ಹೊಂದಿರುವ ಒಬ್ಬ ವಿದ್ಯಾರ್ಥಿಯ ಮೇಲೆ ಈ ಅನುವಾದವನ್ನು ಆಧಾರ

ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ನೀವು ಈಗ ನೋಡುತ್ತೀರಿ. ಆದರೆ ನೀನು ನೇಮ ನಿಷ್ಠೆಗಳ ಕಾರಣದಿಂದ ನಿನ್ನ ಮನಸ್ಸಿನಲ್ಲಿ ಪರದೆ ಹಾಕಲ್ಪಟ್ಟದ್ದರಿಂದ, ನೀನು ಇನ್ನೂ ಅದನ್ನು ನೋಡಲಾರದವನಾಗಿದ್ದರೆ, ಇಲ್ಲೊಂದು ಕಡೇದಾದ ಉದಾಹರಣೆ ಇದೆ. ಹಳೇ ಒಡಂಬಡಿಕೆಯು ಬರೆಯಲ್ಪಟ್ಟ ವಚನಗಳ ಸರಿಯಾದ ಅರ್ಥವನ್ನೂ, ಮತ್ತು ಅದರ ವ್ಯಾಕರಣದ ಸರಿಯಾದ ನಿಯಮಗಳನ್ನೂ ಕ್ರಿಸ್ತ ಶಕ 33ನೇ ಇಸವಿಯ ಮಹಾ ವಿದ್ವಾಂಸರು ಮತ್ತು ಶಾಸ್ತ್ರಿಗಳು ಮತ್ತು ಫರಿಸಾಯರು ತಿಳಿದಿದ್ದರು ಎಂಬದರ ವಿಷಯವಾಗಿ ಯಾರೂ ಸಂಶಯಪಡ ಲಾರರು; ಆದರೆ ಅವರ ಎಲ್ಲಾ ಶ್ರೇಷ್ಠವಾದ ಜ್ಞಾನದಿಂದ, ಅವರು ದೇವರ ವಾಗ್ದಾನಮಾಡಲ್ಪಟ್ಟ ವಾಕ್ಯವು, ಮಗನಲ್ಲಿ ಪ್ರದರ್ಶಿಸಲ್ಪಟ್ಟಿತೆಂಬ ಪ್ರಕಟನೆಯನ್ನು ಹೊಂದಲಾರದಾದರು. ಅಲ್ಲಿ ಆತನು ಆದಿಕಾಂಡದಿಂದ ಮಲಾಕಿಯವರೆಗೆ ಎಲ್ಲಾ ಕಡೆಯಲ್ಲೂ ಕಂಡುಬರುತ್ತಾನೆ. ಎಲ್ಲಾ ಅಧ್ಯಾಯಗಳು ಆತನಿಗೆ ಮತ್ತು ಆತನ ಸೇವೆಗಾಗಿ ಮೀಸಲಾಗಿರುತ್ತವೆ. ಆದರೆ ಆತ್ಮನಿಂದ ಪ್ರಕಾಶವನ್ನು ಹೊಂದಿಕೊಂಡ ಕೆಲವೇ ಜನರ ಹೊರತು, ಅವರು ಆತನನ್ನು ಸಂಪೂರ್ಣವಾಗಿ ತಿಳಿಯಲಾರದವರಾದರು.

ಈಗ ನಾವು ಒಂದು ಸಿದ್ಧಾಂತಕ್ಕೆ ಬರುತ್ತೇವೆ. ನಾವು ವಾಕ್ಯದಲ್ಲಿ ಈಗಾಗಲೇ ಕಂಡುಕೊಂಡಂಥ ನಿರ್ಧಾರ ಮತ್ತು ವಾಕ್ಯದ ಅತಿ ಉತ್ತಮ ದಾಖಲೆಯನ್ನು ಸಾಧ್ಯವಾದಷ್ಟು ಪಡೆಯಲು ನಾವು ಹಳೇದಾದ ಮತ್ತು ಅತೀ ಉತ್ತಮವಾದ ಬರಹಗಳನ್ನು ಕಂಡು ಹಿಡಿಯಲು ಪ್ರಯತ್ನಿಸುವದಟನ್ನು ಎಷ್ಟು ಹೆಚ್ಚಾಗಿ ನಇಂಬಿದರೂ ನಾವು ಎಂದೂ ಅದರ ನಿಜವಾದ ಅರ್ಥವನ್ನು, ಆ ವಚನದ ಹೋಲಿಸುವಿಕೆಯ ಮತ್ತು ಅಭ್ಯಾಸದಿಂದ ಪಡೆಯಲಾರೆವು. ನಾವು ಎಷ್ಟೇ ಪ್ರಾಮಾಣಿಕರಾಗಿದ್ದರೂ, ಅದನ್ನು ಹೊರ ತರಲು ದೇವರಿಂದ ಸಿಗುವ ಪ್ರಕಟನೆಯ ಅಗತ್ಯವಿದೆ. ಪೌಲನು ಸರಿಯಾಗಿ ಅದನ್ನೇ ಹೇಳಿದ್ದಾನೆ. ಆ ವಿಷಯಗಳನ್ನು ನಾವೂ ಹೇಳುವವರಾಗಿದ್ದೇವೆ, ಮನುಷ್ಯನ ಜ್ಞಾನವು ಕಲಿಸುವಂಥ ವಚನಗಳಿಂದಲ್ಲ. ಆದರೆ ಪವಿತ್ರಾತ್ಮನು ಕಲಿಸುವಂಥವುಗಳಿಂದ. 1 ಕೊರಿಂಥ 2:15 ತಾನು ಮಾಡುವೆನೆಂದು ವಾಗ್ದಾನಮಾಡಿದ ವಿಷಯಗಳನ್ನು ಸಮರ್ಥಿಸುವದರ ಮೂಲಕ ದೇವರು ತನ್ನದೇ ಆದ ವಚನವನ್ನು ತರ್ಜುಮೆ ಮಾಡುವದೇ ನಿಜವಾದ ಪ್ರಕಟನೆಯಾಗಿದೆ.

ಈಗ ನಾನು ಹೇಳಿದ ಸಂಗತಿಗಳ ಮೂಲಕವಾಗಿ ಯಾರೂ ತಪ್ಪು ಅಭಿಪ್ರಾಯವನ್ನು ಹೊಂದಿ, ನಾವು ಈಗ ಹೊಂದಿರುವ ವಚನದ ನಿಷ್ಕೃಷ್ಟತೆಯನ್ನು ನಾನು ನಂಬುದಿಲ್ಲವೆಂಬದಾಗಿ ಎಣಿಸಲು ಎಡೆಕೊಡಬೇಡಿರಿ. ಈ ಸತ್ಯವೇದ - ಅದು ಸರಿಯಾಗಿದೆ ಎಂದು ನಾನು ನಂಬುತ್ತೇನೆ. ಯೇಸುವು ಈ ಲೋಕದಲ್ಲಿದ್ದಾಗ ಹಳೇ ಒಡಂಬಡಿಕೆಯನ್ನು ಸಂಪೂರ್ಣವಾಗಿ ಪ್ರಮಾಣೀ

ಕರಿಸಿದ್ದಾನೆ. ಮತ್ತು ಅದು ಹೊಸ ಒಡಂಬಡಿಕೆಯಂತೆಯೇ ಗ್ರಂಥಗಳಿಂದ ಸರಿಯಾಗಿ ಸಂಗ್ರಹಮಾಡಲ್ಪಟ್ಟದೆ. ಇದರ ವಿಷಯ ಯಾವ ತಪ್ಪನ್ನೂ ಮಾಡದಿರಿ. ಈ ದಿನ ನಮ್ಮೊಡನೆ ಎಂದೂ ತಪ್ಪಿ ಹೋಗದ ದೇವರ ವಾಕ್ಯವು ಇದೆ. ಮತ್ತು ಅದರಿಂದ ತೆಗೆಯಲು ಮತ್ತು ಅದಕ್ಕೆ ಕೂಡಿಸಲು ಯಾವ ಮನುಷ್ಯನೂ ಧೈರ್ಯ ಮಾಡಲಾರನು. ಆದರೆ ಅದನ್ನು ನಮಗೆ ಕಲಿಸಲು, ಅದನ್ನು ಕೊಟ್ಟ ಅದೇ ಆತ್ಮದ ಅಗತ್ಯವಿದೆ.

ಓ, ಆತ್ಮದಿಂದಾಗುವ ಪ್ರಕಟನೆಯ ಅಗತ್ಯ ಎಷ್ಟಾಗಿ ನಮಗೆ ಇದೆ. ನಮಗೆ ಒಂದು ಹೊಸ ಸತ್ಯವೇದದ ಅಗತ್ಯವಿರುವದಿಲ್ಲ. ನಮಗೆ ಒಂದು ಹೊಸ ಅನುವಾದದ ಅಗತ್ಯವಿರುವದಿಲ್ಲ, ಕೆಲವು ಅನುವಾದಗಳು ಬಹಳ ಉತ್ತಮವಾದದ್ದಾಗಿರಬಹುದು, ಮತ್ತು ನಾವು ಅವುಗಳ ವಿರುದ್ಧವಾಗಿ ಇಲ್ಲ. ಆದರೆ ನಮಗೆ ಆತ್ಮನಿಂದಾಗುವ ಪ್ರಕಟನೆಯ ಅಗತ್ಯವಿದೆ. ಮತ್ತು ದೇವರಿಗೆ ಸ್ತೋತ್ರವಾಗಲಿ, ನಮಗೇನು ಅಗತ್ಯವಿದೆಯೋ ಅದನ್ನು ನಾವು ಹೊಂದಬಹುದು; ಯಾಕಂದರೆ ದೇವರು ಆತನ ವಾಕ್ಯವನ್ನು ಆತನ ಆತ್ಮನ ಮೂಲಕವಾಗಿ ನಮಗೆ ಪ್ರಕಟಿಸಲು ಇಚ್ಛೈಸುವವನಾಗಿದ್ದಾನೆ.

ದೇವರು ಆತ್ಮನ ಮೂಲಕವಾಗಿ ನಮಗೆ ನಿರಂತರವಾದ ಜೀವದಾಯಕ ಮತ್ತು ಜಯಶಾಲಿಯಾದ ಪ್ರಕಟನೆಯನ್ನು ಕೊಡಲು ಪ್ರಾರಂಭಮಾಡಲಿ. ಓ, ಸಭೆಯು ಕೇವಲ ಒಂದು ಹೊಸ ಪ್ರಕಟನೆಯನ್ನು ಹೊಂದಿ, ಮತ್ತು ಅದರಿಂದ ಪ್ರದರ್ಶಿಸಲ್ಪಟ್ಟ ಜೀವಿಸುವ ವಾಕ್ಯವಾಗುವದಾದರೆ, ನಾವು ಮಹತ್ತಾದ ಕಾರ್ಯಗಳನ್ನು ಮಾಡಿ ಪರಲೋಕದಲ್ಲಿರುವ ನಮ್ಮ ತಂದೆಯಾದ ದೇವರನ್ನು ಮಹಿಮೆ ಪಡಿಸುತ್ತಿದ್ದೆವು.

**ಟಿಪ್ಪಣಿ: "ಏಳು ಸಭೆಯ ಕಾಲಗಳು"** ಎಂಬ ಪುಸ್ತಕದಿಂದ ತೆಗೆಯಲ್ಪಟ್ಟದ್ದು.

ಪುಸ್ತಕಗಳಿಗಾಗಿ ಸಂಪರ್ಕಿಸಿರಿ

ಎಸ್. ಡ್ಯಾನಿಯೆಲ್ ಸಂಪತ್ ಕುಮಾರ್

ತಿರುನಿಲೈ ಕಾಲೋನಿ ನಂ. 147,

ವಿಚ್ಚೂರ್. ಪೋಸ್ಟ್

ಚನ್ನೈ . ಪಿನ್. 600103




*for books contact :*

**S.DANIEL SAMPATH KUMAR**

*No. 147, Thirunilai colony ,*
*vichoor post , chennai - 600 103*

*E-Mail : sdanielsampathkumar@gmail.com*
*Website : danielendtimebooksministry.org*
*Phone No :* 99419 74213 , 96001 71260